# ಬಾಳಪ್ಪ ಹುಕ್ಕೇರಿ



ಡಾ|| ವೀರಣ್ಣ ದಂಡೆ

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ
ನಂ. 14/3, ಕೆನರಾ ಫೈನಾನ್ಸ್ ಕಾರ್ಪೊರೇಷನ್ ಕಟ್ಟಡ
ನೃಪತುಂಗ ರಸ್ತೆ, ಬೆಂಗಳೂರು - 560 001

# ಬಾಳಪ್ಪ ಹುಕ್ಕೇರಿ

ಲೇಖಕರು :

**ಡಾ|| ವೀರಣ್ಣ ದಂಡೆ**

**ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ**

ನಂ. 14/3, ಕೆನರಾ ಫೈನಾನ್ಸ್ ಕಾರ್ಪೋರೇಷನ್ ಕಟ್ಟಡ

ನೃಪತುಂಗ ರಸ್ತೆ, ಬೆಂಗಳೂರು - 560 001

ಫೋನ್ : 2215072

# BALAPPA HUKKERI

***Written by Dr. Veeranna Dande***
*Reader*
*Kannada Adhyayana Samsthe*
*Gulbarga University,*
*Gulbarga - 585106*

First Editon 1999

Chief Editor : Sugganahalli Shadakshari

Published by : **Balawant Rao Patil**
Registrar, Karnataka Sangeetha Nrithya Academy
14/3, Canara Finance Corporation Bldg.,
Nrupatunga Road, Bangalore-560 001

**Price : 30/-**

Printed at :
**Sree Ranga Printers & Binders**
No.242, 7th Cross, 10th Main
Hanumanthanagar, Bangalore-560 019
Phone : 6679333

# ಅಧ್ಯಕ್ಷರ ಮಾತು

ಕರ್ನಾಟಕದ ಜಾನಪದ ಸಂಗೀತ ಕ್ಷೇತ್ರದಲ್ಲಿ ಉತ್ತುಂಗ ಶಿಖರಕ್ಕೇರಿ ಕೀರ್ತಿಶೇಷರಾದ ಮಹಾನ್ ಗಾಯಕ ಬಾಳಪ್ಪ ಹುಕ್ಕೇರಿಯವರು ಜಾನಪದ ಸಂಗೀತಕ್ಕೆ ಕಛೇರಿ ವೇದಿಕೆಯ ಗೌರವವನ್ನು ದೊರಕಿಸಲು ಕಾರಣರಾದವರು. ಜಾನಪದ ಸಂಗೀತಕ್ಕೆ ಶಾಸ್ತ್ರೀಯ ಸಂಗೀತದಂತೆ ಒಂದು ಚೌಕಟ್ಟನ್ನು ರೂಪಿಸಿ, ತಮ್ಮ ಈ ಶೈಲಿಯನ್ನು ಹಳ್ಳಿಯಿಂದ ದಿಲ್ಲಿಯವರೆಗೆ ಕೊಂಡೊಯ್ದು ಕರ್ನಾಟಕದ ಜನಪದ ಸಂಗೀತಕ್ಕೆ ರಾಷ್ಟ್ರೀಯ ಮಟ್ಟದ ಘನತೆ ಕೊಡಿಸುವಲ್ಲಿ ಯಶಸ್ವಿಯಾದವರು.

ತಮ್ಮ ಎಂಟು ದಶಕಗಳ ಸುದೀರ್ಘ ಜೀವನದಲ್ಲಿ ಲೋಕಪ್ರಿಯ ಸಂಗೀತ ಶೈಲಿಯನ್ನು ಹುಟ್ಟು ಹಾಕಿದರಿವರು. ಜಾನಪದ ಸಂಗೀತದಿಂದ ಭಾವಗೀತೆ, ಬಾವಗೀತೆಯಿಂದ ಸುಗಮ ಸಂಗೀತ-ಈ ರೀತಿಯ ಸಂಸ್ಕಾರ ವಿಕಾಸದ ಪ್ರಕ್ರಿಯೆಯನ್ನು ನೋಡಿ, ತಮ್ಮ ಹಾಡಿನ ಶೈಲಿಯು ಆಯಾಯ ಪೀಳಿಗೆಯ ಅಭಿರುಚಿಗೆ ಸ್ಪಂದಿಸುವಂತೆ ಜನರ ಮನಮುಟ್ಟಿ ಹಾಡಿದ ತೆರೆದ ಮನಸ್ಸಿನ ಸಂಗೀತಗಾರ, ಗಾಯಕ ಬಾಳಪ್ಪ ಹುಕ್ಕೇರಿ. ಹಾಸ್ಯ ಪ್ರಜ್ಞೆ ಇವರ ವೈಶಿಷ್ಟ್ಯ. ನೋವಿನ ಗೀತೆಗಳಲ್ಲಿ ವಿಷಾದದೊಂದಿಗೆ ವಿನೋದವನ್ನೂ ಮೇಳೈಸುತ್ತಿದ್ದ ಇವರ ಶೈಲಿ ಅಪೂರ್ವ.

ಇಂತಹ ಪರಿಪೂರ್ಣ ಕಲಾವಿದನ ಬಗ್ಗೆ ರಚಿಸಿರುವ ಈ ಕಿರುಪುಸ್ತಕದಲ್ಲಿ ಬಾಳಪ್ಪ ಹುಕ್ಕೇರಿಯವರ ಜೀವನವನ್ನು, ಅದರಲ್ಲಿನ ವಿಭಿನ್ನ ವಿಶೇಷಗಳನ್ನು ಸ್ಪಷ್ಟವಾಗಿ ವರ್ಗೀಕರಿಸಿ ನಮ್ಮ ಮುಂದಿಟ್ಟಿರುವ ಲೇಖಕ ಡಾ॥ ವೀರಣ್ಣ ದಂಡೆಯವರ ಬರವಣಿಗೆಯು ಅಧ್ಯಯನ ಶೀಲತೆಯ ದ್ಯೋತಕವಾಗಿದೆ. ಕೃತಿಯು ಸಾರ್ಥಕವಾಗಿದೆ ಎಂದು ನನ್ನ ಅನಿಸಿಕೆ. ಗಾಯಕನಾಗಿ, ಸಂಗೀತಗಾರನಾಗಿ ಬಾಳಪ್ಪ ಹುಕ್ಕೇರಿಯವರು ಬೆಳೆಯುತ್ತಾ ಹೋದ ಸುದೀರ್ಘ ವೃತ್ತಾಂತವನ್ನು ಕೆಲವೇ ಪುಟಗಳಲ್ಲಿ ಇಳಿಸಿ, ವ್ಯಕ್ತಿತ್ವದ ಸಂಪೂರ್ಣ ಪರಿಚಯವನ್ನು ಮಾಡಿಸುವ ನಮ್ಮ ಕಿರುಪುಸ್ತಕದ ಯೋಜನೆಗೆ ಈ ಕೃತಿಯು ಒಂದು ಒಳ್ಳೆಯ ಕೊಡುಗೆಯಾಗಿದೆ. ಲೇಖಕರಿಗೆ ಅಕಾಡೆಮಿಯ ಅಭಿನಂದನೆಗಳು ಮತ್ತು ಧನ್ಯವಾದಗಳು.

ಉಭಯಗಾನ ವಿಧುಷಿ
**ಶ್ಯಾಮಲಾ ಜಿ. ಭಾವೆ**
ಅಧ್ಯಕ್ಷರು

## ಸಂಪಾದಕರ ಲೇಖನಿಯಿಂದ............

ಸುಗಮ ಸಂಗೀತದ ಹಿರಿಯ ಕಲಾವಿದರಲ್ಲಿ ಶ್ರೀ ಮೈಸೂರು ಅನಂತಸ್ವಾಮಿಯವರ ಬಗ್ಗೆ ಈಗಾಗಲೇ ನಮ್ಮ ಅಕಾಡೆಮಿ ಪುಸ್ತಕವೊಂದನ್ನು ಹೊರತಂದಿದೆ. ಈಗ ಶ್ರೀ ಬಾಳಪ್ಪ ಹುಕ್ಕೇರಿಯವರ ಬಗೆಗಿನ ಈ ಹೊತ್ತಿಗೆಯನ್ನು ಓದುಗರಿಗೆ ಒದಗಿಸುತ್ತಿರುವುದಕ್ಕೆ ನಾವು ಹೆಮ್ಮೆ ಪಡುತ್ತೇವೆ.

ಶ್ರೀ ವೀರಣ್ಣ ದಂಡೆಯವರು ಬಹಳ ದೊಡ್ಡ ಬರಹಗಾರರು. ಭಾಷೆಯ ಬಗ್ಗೆ, ಅದರಲ್ಲೂ ಉತ್ತರ ಕರ್ನಾಟಕದ ಕನ್ನಡ ಭಾಷೆಯ ಬಗ್ಗೆ ಅಧಿಕೃತ ಹಿಡಿತ ಹೊಂದಿರುವವರು. ಅವರಿಂದ ಈ ಪುಸ್ತಕ ರೂಪು ಪಡೆದಿರುವುದು ಹೆಚ್ಚು ಅರ್ಥಪೂರ್ಣ.

ಲೇಖಕರಾದ ಶ್ರೀ ವೀರಣ್ಣ ದಂಡೆಯವರಿಗೆ ನಮ್ಮ ಧನ್ಯವಾದಗಳು. ಎಂದಿನಂತೆ ಮುದ್ರಣದ ಜವಾಬ್ದಾರಿಯನ್ನು ಬಹಳ ವಿಶ್ವಾಸದಿಂದ ನಿಭಾಯಿಸುವ ಶ್ರೀರಂಗ ಪ್ರಿಂಟರ್ಸ್ ಮತ್ತು ಬೈಂಡರ್ಸ್‌ನ ಮಾಲೀಕರು ಮತ್ತು ಸಿಬ್ಬಂದಿ ವರ್ಗದವರಿಗೆ ನನ್ನ ಕೃತಜ್ಞತೆಗಳು. ಅಕಾಡೆಮಿಯ ಪ್ರಕಟಣೆಗಳ ಬಗ್ಗೆ ಮೆಚ್ಚುಗೆಯಿಂದ ಹುರಿದುಂಬಿಸುತ್ತಿರುವ ಅಧ್ಯಕ್ಷರು ಮತ್ತು ಸದಸ್ಯರೆಲ್ಲರಿಗೆ ನನ್ನ ನಮಸ್ಕಾರಗಳು.

ಓದುಗರು ಈ ಪುಸ್ತಕವನ್ನು ಸ್ವೀಕರಿಸುವರೆಂಬ ನಂಬುಗೆಯೊಡನೆ......

ಸುಗ್ಗನಹಳ್ಳಿ ಷಡಕ್ಷರಿ
ಪ್ರಧಾನ ಸಂಪಾದಕರು

೧ ಮಾರ್ಚ್ ೧೯೯೯
ಬೆಂಗಳೂರು

## ಲೇಖಕರ ಮಾತು

ಶ್ರೀ ಬಾಳಪ್ಪ ಹುಕ್ಕೇರಿ ಅವರು ಕನ್ನಡ ನಾಡು ಕಂಡ ಮಹಾನ್ ಹಾಡುಗಾರರಲ್ಲಿ ಒಬ್ಬರು. ಹಳ್ಳಿಯ ಕಡುಬಡತನದ ಕುಟುಂಬ ಒಂದರಲ್ಲಿ ಜನಿಸಿ, ತನ್ನ ಹಾಡುಗಾರಿಕೆಯಿಂದಲೇ ದಿಲ್ಲಿಯವರೆಗೆ ಪ್ರಸಿದ್ಧರಾದ ಅಪರೂಪದ ಕನ್ನಡ ಗಾಯಕ. ಅವರ ಶ್ರೋತೃ ಬಳಗದಲ್ಲಿ ಹಳ್ಳಿಯ ರೈತರಿಂದ ಮೊದಲಾಗಿ- ರಾಜ್ಯದ ಮುಖ್ಯ ಮಂತ್ರಿಗಳು, ರಾಷ್ಟ್ರದ ಪ್ರಧಾನ ಮಂತ್ರಿಗಳು, ರಾಷ್ಟ್ರಪತಿಗಳು ಸೇರಿದ್ದಾರೆಂಬುದೇ ಹೆಮ್ಮೆಯ ಸಂಗತಿ. ಅಂಥವರ ಜೀವನದ ಬಗ್ಗೆ ಒಂದು ಕಿರುಪರಿಚಯಾತ್ಮಕ ಪುಸ್ತಕ ಬರೆಯಲು ಅವಕಾಶ ಮಾಡಿಕೊಟ್ಟವರು- ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯವರು. ಅದಕ್ಕಾಗಿ ಅದರ ಅಧ್ಯಕ್ಷರಾದ ಶ್ರೀಮತಿ ಶ್ಯಾಮಲಾ ಜಿ. ಭಾವೆ ಅವರಿಗೂ ಅಕಾಡೆಮಿಯ ಸರ್ವ ಸದಸ್ಯರಿಗೂ ನಾನು ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ನನಗೆ ಬೇಕಾದ ಎಲ್ಲ ಪುಸ್ತಕಗಳನ್ನು ಅಪರೂಪದ ಭಾವಚಿತ್ರಗಳನ್ನು ಒದಗಿಸಿದವರು- ಈಗ ಧಾರವಾಡದಲ್ಲಿರುವ ಬಾಳಪ್ಪನವರ ಮಗನಾದ ಶ್ರೀ ಎ.ಬಿ. ಹುಕ್ಕೇರಿ ಅವರು. ಅವನ್ನು ಕೊಡಿಸುವಲ್ಲಿ ಪ್ರಯತ್ನಿಸಿದವರು ನನ್ನ ಬಂಧುವಾದ ಶ್ರೀ ಸಂಗಮೇಶ ಅಂಗಡಿ ಅವರು. ಅದಕ್ಕಾಗಿ ಇವರಿಗೆಲ್ಲ ನನ್ನ ನೆನಕೆಗಳು ಸಲ್ಲುತ್ತದೆ.

೮-೨-೧೯೯೫
ಕಲುಬುರ್ಗಿ


ವೀರಣ್ಣ ದಂಡೆ



ಬಾಳಗೀತೆಗೆ ಶೃತಿಯಾದ ಶ್ರೀಮತಿ ಶಾಂತಾದೇವಿಯವರೊಡನೆ



ಧೀಮಂತ ನಿಲುವು



ನೆಹರು ಅವರೊಂದಿಗೆ 1955ರ ಅಪೂರ್ವ ಚಿತ್ರ



ರಾಷ್ಟ್ರಕವಿ ಕುವೆಂಪು ಜೊತೆ



ವೇದಿಕೆಯಲ್ಲಿ ಗಾನಝರಿ




ಬೆಂಗಳೂರಿನಲ್ಲಿ ಪೌರ ಸನ್ಮಾನ ಮಾಜಿ ಉಪರಾಷ್ಟ್ರಪತಿ ಬಿ. ಡಿ ಜತ್ತಿ ಅವರಿಂದ





ಧಾರವಾಡದಲ್ಲಿ ಡಿ. ವೀರೇಂದ್ರ ಹೆಗ್ಗಡೆ ಅವರಿಂದ ಅಭಿನಂದನೆ



ಶ್ರೀ ಕರಿಬಸವಯ್ಯನವರಿಂದ ಗಾನಗಾರುಡಿಗನಿಗೆ ಅಭಿನಂದನೆ



ಮಾಜಿ ಮುಖ್ಯಮಂತ್ರಿ ಶ್ರೀ ವೀರಪ್ಪಮೊಯ್ಲಿ ಹುಕ್ಕೇರಿಯವರನ್ನು ಅಭಿಮಾನದಿಂದ ಸನ್ಮಾನಿಸುತ್ತಿರುವುದು



ಸಾಹಿತಿ ಗೊರುಚ ಅವರಿಂದ ಗೌರವ ಸಮರ್ಪಣೆ

೧. ಬಾಳಪ್ಪನ ಬದುಕು ತೆರೆದುಕೊಂಡಾಗ

೨. ಬದಲಾದ ಬದುಕಿನ ದಾರಿಯಗುಂಟ

೩. ಮಾತನಾಡಲು ಬಾಯಿ ಹಾಡಲು ಕಂಠ

೪. ಹಾಡು ಹರವಿದ ಎತ್ತರ ಬಿತ್ತರಗಳು

೧

# ಬಾಳಪ್ಪನ ಬದುಕು ತೆರೆದುಕೊಂಡಾಗ

ಸಾವಿರ ಹಾಡಿನ ಸರದಾರನೆಂದೇ ಖ್ಯಾತಿ ಪಡೆದ, 'ಹಾಡನ್ನು ಹರವೋಣ ಮತ್ಸರ ಮರೆಯೋಣ' - ಎಂಬ ಧ್ಯೇಯವಾಕ್ಯ ಸ್ವೀಕರಿಸಿದ ಜಾನಪದ ಗೀತಗಾರುಡಿಗ ಬಾಳಪ್ಪ ವೀರಭದ್ರಪ್ಪ ಹುಕ್ಕೇರಿ ಕನ್ನಡನಾಡು ಕಂಡ ಅದ್ಭುತಗಳಲ್ಲಿ ಒಬ್ಬರು. ಒಬ್ಬ ಹಳ್ಳಿಯ ನಿವಾಸಿ - ತನ್ನ ಹಳ್ಳಿಯನ್ನು ಹಳ್ಳಿಯ ಜನರನ್ನು ಪ್ರೀತಿಸುತ್ತಾ, ಹುಟ್ಟಿದ ಹಳ್ಳಿಯ ವ್ಯಾಮೋಹವನ್ನು ಬಿಡದೇ, ದಿಲ್ಲಿಯವರೆಗೆ ತನ್ನ ಕಾರ್ಯಕ್ಷೇತ್ರವನ್ನು ಹರಹಿಕೊಂಡು ಬೆಳೆದದ್ದು ಇತಿಹಾಸವೇ ಹುಬ್ಬೇರಿಸುವಂಥದ್ದು. ಇಷ್ಟೆಲ್ಲ ಕೀರ್ತಿ, ಯಶಸ್ಸು ಬಂದದ್ದು ನಾವೆಲ್ಲ ಸಾಮಾನ್ಯವೆಂದು ಗ್ರಹಿಸಿದ ಜನಪ್ರಿಯ ಹಾಡುಗಾರಿಕೆಯಿಂದ. ಇಷ್ಟೊಂದು ಎತ್ತರಕ್ಕೇರಿದ್ದು, ಜೊತೆಗೆ ಆ ಹಾಡುಗಾರಿಕೆ ಬಗ್ಗೆ ಎಲ್ಲರಲ್ಲಿ ಗೌರವ ಹೆಚ್ಚುವಂತೆ ಮಾಡಿದ್ದು ಬಾಳಪ್ಪನವರ ಮಹತ್ವದ ಸಾಧನೆ.

ಇದನ್ನೆಲ್ಲ ಗಮನಿಸಿದ ಹಿರಿಯರೊಬ್ಬರು (ಗೋರುಚ) ಹೀಗೆ ಬರೆಯುತ್ತಾರೆ: ''ಓಡಾಡಿ ಹಣ್ಣಾದವರು ಕೆಲವರು. ನಾಡಿನಾದ್ಯಂತ ಐವತ್ತು ವರ್ಷಗಳಿಂದ ಹಾಡಿಕೊಂಡು ಬಂದಿರುವ ಬಾಳಪ್ಪ ಹುಕ್ಕೇರಿ ಅವರು ಮಾತ್ರ ಹಣ್ಣಾಗಿಲ್ಲ. ಎಪ್ಪತ್ತು ದಾಟಿದ್ದರೂ ಇಪ್ಪತ್ತರ ಹರೆಯದ ಉತ್ಸಾಹ, ಮೋಜಿನ ಮಾತು, ನಗೆಯ ನುಡಿ! ಬಾಳಪ್ಪ ಓರ್ವ ಅಪರೂಪದ ಕಲಾವಿದ. ಮತ್ತೊಬ್ಬ ಬಾಳಪ್ಪನವರನ್ನು ಕಾಣುತ್ತೇವೆಂದು ಹೇಳಲಾಗದು.''[೧] ಇದೊಂದು ಪ್ರಶಂಸೆಯ ಮಾತೆಂದರೂ ಇದರಲ್ಲಿ ಬಹಳಷ್ಟು ಸತ್ಯ ಅಡಗಿದೆ ಎಂಬುದು ನಿರ್ವಿವಾದ.

ಒಬ್ಬ ಪ್ರತಿಭಾವಂತ ಕಲಾಕಾರನ ಏಳುಬೀಳಿನ ಕಥೆ ಗಮನಿಸುವುದು ಎಂದರೆ ನಮ್ಮ ಸಂಸ್ಕೃತಿಯ ಏಳುಬೀಳಿನ ಕಥೆಯನ್ನು

---

೧. ಗೋರುಚ (ಸಂ), ಜಾನಪದ ಸರದಾರ ಬಾಳಪ್ಪ ಹುಕ್ಕೇರಿ, (ಸಂಪಾದಕರ ಮಾತು).

ಗಮನಿಸಿದಂತೆಯೇ. ಅದರಲ್ಲೂ ಹುಕ್ಕೇರಿ ಬಾಳಪ್ಪನಂಥವರ ಜೀವನ ಮತ್ತು ಸಾಧನೆಯ ಕಥೆ-ನಮ್ಮ ಸಂಸ್ಕೃತಿ ರೂಪಿಸುವ ಅಗಾಧಗಳಿಗೆ ಉದಾಹರಣೆಗಳಂತಿರುತ್ತದೆ.

ಬಾಳಪ್ಪ ತೀರ ಸಾಧಾರಣ ಮನೆತನದಲ್ಲಿ ಹುಟ್ಟಿದವರು. ಬಾಲ್ಯದಲ್ಲಿ ಅನಂತ ಆತಂಕಗಳನ್ನು ಎದುರಿಸಿದವರು. ಆದರೂ ತನ್ನೂರಿನ ಪ್ರೇಮವನ್ನು ಎಂದೂ ಬಿಡದವರು. ಸತ್ತರೆ ತನ್ನೂರಿನಲ್ಲಿಯೇ ಸಾಯಬೇಕೆಂದು ಬಯಸಿದವರು. ಹುಟ್ಟಿದ ಊರಿನಲ್ಲಿ ಸಾವು ದೊರಕುವುದೆಂದರೆ ಅದೊಂದು ಪುಣ್ಯ ಎಂತಲೇ ಭಾವಿಸಿದ ಅವರು-ಒಂದು ದಿನ ಅದನ್ನೂ ಪಡೆದವರು.

ಪ್ರತಿಭಾವಂತರನ್ನು ಕೊಡುವ ಪ್ರದೇಶದ ಗುಣವೂ ವಿಶಿಷ್ಟವಾಗಿರುತ್ತದೆ. ಆ ಪ್ರದೇಶದಲ್ಲಿ ಯಾವುದೋ ಒಂದು ಅಪರೂಪದ ಸಂಗತಿ ಕಾಣಿಸಿಕೊಂಡರೂ ಪರೀಕ್ಷಿಸಿ ನೋಡಿದರೆ ಅಲ್ಲಿ ಅಂತಹ ಹಲಬಗೆಯ ವೈಶಿಷ್ಟ್ಯಗಳು ಕಾಣಿಸಿಕೊಳ್ಳುತ್ತವೆ. ಇಂಥವಕ್ಕೇ ಊರಿನ ಪುಣ್ಯ ಎನ್ನುವುದು. ಶ್ರೀ ಬಾಳಪ್ಪ ಹುಕ್ಕೇರಿ ಅವರು ಜನಿಸಿದ ಮುರುಗೋಡ ಅಂತಹ ಅದ್ಭುತ ಹಳ್ಳಿ, ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಹೊಂಗಲನಾಡಿನ ಅಪರೂಪದ ಗುಣಗಳುಳ್ಳ ಹಳ್ಳಿ ಅದು.

ಹನ್ನೆರಡನೆಯ ಶತಮಾನದ ಒಂದು ಶರಣರ ಗುಂಪು ಕ್ರಾಂತಿಯ ನಂತರ ಉಳುವಿಗೆ ಹೋಗುವ ದಾರಿಯಲ್ಲಿ ತಂಗಿದ್ದ ಊರದು. ಅದಕ್ಕಾಗಿ ಅದು ಉಳುವಿಯ ಬಾಗಿಲು ಎಂದೇ ಹೆಸರಾಗಿದೆ. ಶರಣರು ತಮ್ಮ ವೈರಿಗಳ ಜೊತೆ - ಕೊನೆಯದಾಗಿ ಹೋರಾಡಿದ ಸ್ಥಳ ಅದು. ಅವರ ಜಗಳವೆಲ್ಲ ಅಲ್ಲಿ ಮುರುಗಡೆಯಾದುದರಿಂದ ಆ ಊರಿಗೆ ಮುರಗೋಡು ಎಂಬ ಹೆಸರು ಬಂದಿದೆ ಎಂದು ಹೇಳಲಾಗುತ್ತದೆ. ಶರಣರು ತಮ್ಮ ಹೋರಾಟಕ್ಕೆ ಬಳಸಿದ ಶಸ್ತ್ರಗಳನ್ನು ಒಗೆದು, ರಕ್ತಸಿಕ್ತ ಬಟ್ಟೆಗಳನ್ನು ಅಲ್ಲಿಯ ಒಂದು ಕೆರೆಯಲ್ಲಿ ತೊಳೆದುದರಿಂದ ಆ ಕೆರೆಗೆ 'ಕೆಂಗೆರೆ' ಎಂಬ ಹೆಸರು ಬಂದಿತಂತೆ. ಆ ಊರಿಗೆ ಮುರುಗೋಡು ಎಂಬ ಹೆಸರು ಬರಲು ಇನ್ನೊಂದು ಸಂಗತಿಯನ್ನೂ ಹೇಳಲಾಗುತ್ತದೆ. ಮುರುಗೋಡದ ಸುತ್ತಲೂ ಕೂಡಿರುವ ಮೂರುಗುಡ್ಡಗಳು 'ಮುರುಗೋಡು' ಎಂದಾಗಲು ಕಾರಣವಾಗಿವೆಯಂತೆ. ಒಂದು ಊರಿನ ಹೆಸರಿನ ಹಿಂದೆ ಇಷ್ಟೆಲ್ಲಾ ಕತೆಗಳಿರುವುದು, ಚಾರಿತ್ರಿಕವಾಗಿ

ಗಮನಾರ್ಹ ಸಂಗತಿಗಳೆನಿಸುತ್ತವೆ.

ಇಂತಹ ಚಾರಿತ್ರಿಕ ಮಹತ್ವ ಪಡೆದ ಮುರುಗೋಡಿನಲ್ಲಿ ಕಾಣಿಸಿಕೊಂಡ ಪ್ರತಿಭೆಗಳಿಗೇನೂ ಕೊರತೆ ಇಲ್ಲ. ಪವಾಡ ಪುರುಷ ಶ್ರೀ ಚಿದಂಬರರು ನೆಲೆಸಿದ ಊರದು. ಆ ಊರಿನ ಸಿದ್ಧನ ಗವಿಯಲ್ಲಿ ಗರಗದ ಮಡಿವಾಳಪ್ಪನವರು ಕೆಲದಿನಗಳವರೆಗೆ ವಾಸವಾಗಿದ್ದರಂತೆ. ಮುರುಗೋಡಿನ ದುರದುಂಡೀಶ್ವರ ಮಠದ ಉತ್ತರಾಧಿಕಾರಿ ಶ್ರೀಮಹಾಂತೇಶ ಸ್ವಾಮಿಗಳು ಜೀವಿಸಿದ ಪುಣ್ಯ ಭೂಮಿಯದು.

ಬಾಳಪ್ಪನವರು ಜೀವಿಸಿದ್ದ ಕಾಲದಲ್ಲಿ ಶಿವಲಿಂಗಯ್ಯನವರ ಮನೆ ಸಂಗೀತದ ಪಾಠಶಾಲೆಯಾಗಿತ್ತಂತೆ. ಆ ಊರಿನ ಪ್ರತಿ ಮನೆಯಲ್ಲೂ ಒಂದೊಂದು ಹಾರ್ಮೋನಿಯಂ ಪೆಟ್ಟಿಗೆಗಳಿದ್ದವಂತೆ. ಅಂದರೆ ಸಂಗೀತಕ್ಕೆ, ಹಾಡುಗಾರಿಕೆಗೆ ಪ್ರಸಿದ್ಧಿ ಆದ ಊರು ಅದಾಗಿತ್ತು. ಆ ಊರಿನ ಗಂಗಾಧರ ಕೆಲಗೇರಿ, ಮಲ್ಲಿಕಾರ್ಜುನ ಅಣ್ಣಿಗೇರಿ - ಇಬ್ಬರೂ ಪ್ರಸಿದ್ಧ ರಂಗಭೂಮಿ ಕಲಾವಿದರು. ನರಸಿಂಹಾಚಾರ್ಯ, ಕೃಷ್ಣ ಪಾರಿಜಾತದ ಜೋಷಿ, ದೊಡ್ಡಾಟದ ಗುರುಪಾದಪ್ಪ ಕರ್ಜಗಿ, ಸಂಗ್ಯಾ-ಬಾಳ್ಯಾ ನಾಟಕದ ಈರಪ್ಪ ಹಲಕಿ, ಲಾವಣಿಕಾರರಾದ ರಾಣು, ಕೂಬಣ್ಣ-ಈ ಪ್ರಸಿದ್ಧ ಪ್ರತಿಭಾವಂತ ಕಲಾವಿದರನ್ನು ಕೊಟ್ಟ ಊರು 'ಮುರುಗೋಡ'. ಇದು ಎಲ್ಲಾ ಗ್ರಾಮೀಣ ಕಸುಬುಗಳಿಗೂ ಪ್ರಸಿದ್ಧವಾದ ಊರು. ಬಣ್ಣದ ಹಚ್ಚಡ ತಯಾರಿಕೆ, ಚಮ್ಮಾರಿಕೆ, ಬಳೆಗಾರಿಕೆ ಇತ್ಯಾದಿ ಕಸುಬುದಾರರು ಮುರುಗೋಡಿನಲ್ಲಿದ್ದರು.

ಇದೆಲ್ಲವನ್ನು ನೆನಸಿಕೊಂಡಾಗ ಮುರುಗೋಡದ ನೈಸರ್ಗಿಕ ಗುಣದಲ್ಲಿಯೇ ಏನೋ ಅದ್ಭುತ ಅಡಗಿದೆ ಅನಿಸುತ್ತದೆ. ಪ್ರತಿಭೆಗಳನ್ನು ಹುಟ್ಟುಹಾಕುವ ಮೂಲಗುಣವೇ ಮುರುಗೋಡಿನ ನೀರು, ನೆಲ, ಗಾಳಿಯಲ್ಲಿರುವಂತೆ ತೋರುತ್ತದೆ. ಇಂತಹ ಊರಿನ ಅಪರೂಪದ ಕೊಡುಗೆಯೇ ಶ್ರೀ ಬಾಳಪ್ಪ ಹುಕ್ಕೇರಿ.

## ಜನನ ಮತ್ತು ಬಾಲ್ಯ:

ಬಾಳಪ್ಪನವರ ತಂದೆಯ ಹೆಸರು ವೀರಭದ್ರಪ್ಪ. ತಾಯಿ ಚೆನ್ನವೀರಮ್ಮ. ಅವರ ಹಿರಿಯರು ಹುಕ್ಕೇರಿಯಿಂದ ಮುರುಗೋಡಿಗೆ ಬಂದುದರಿಂದ ಅವರ ಮನೆತನದ ಹೆಸರು ಹುಕ್ಕೇರಿ ಎಂದಾಯಿತು.

ವೀರಶೈವ ಮತಾವಲಂಬಿಗಳಾದ ಈ ದಂಪತಿಗಳ ಉದರದಲ್ಲಿ ಬಾಳಪ್ಪನವರು ದಿನಾಂಕ ೨೧-೮-೧೯೧೧ರಲ್ಲಿ ಜನಿಸಿದರು. ಬಾಳಪ್ಪನವರು ಶಿವಾಧೀನರಾದುದು ೧೯-೧೧-೧೯೯೨ರಂದು. ಎಂಬತ್ತೊಂದು ಸಂವತ್ಸರಗಳನ್ನು ಕಂಡ ದೀರ್ಘಾಯುಷಿ ಅವರು. ತನ್ನ ಜೀವಮಾನದ ಆರು ದಶಕಗಳನ್ನು ಹಾಡಿನ ಮೋಡಿಗೆ ಅರ್ಪಿಸಿ ತನ್ನ ಕಂಠದ ಸಿರಿಗೆ ಜನ ಜೋತುಬೀಳುವಂತೆ ಮಾಡಿದ ಗಾರುಡಿಗ ಅವರು.

ಬಾಳಪ್ಪ ತಮ್ಮೂರಿನಲ್ಲಿ ಕಲಿತದ್ದು ಐದನೆಯ ಈಯತ್ತೆವರೆಗೆ. ಹೆಚ್ಚಿನ ಶಿಕ್ಷಣಕ್ಕಾಗಿ ಅವರು ಬೈಲಹೊಂಗಲಕ್ಕೆ ಹೋಗಬೇಕಾಯಿತು. ಅಲ್ಲಿನ ಜಾನ್ಸನ್ ಹೈಸ್ಕೂಲಿನಲ್ಲಿ ಮುಂದಿನ ಅಭ್ಯಾಸಕ್ಕಾಗಿ ಹೆಸರು ನೊಂದಾಯಿಸಿದರು. ಆದರೆ ಶಿಕ್ಷಣವನ್ನು ಮುಂದುವರಿಸಲು ಸಾಧ್ಯವಾಗಲಿಲ್ಲ. ಅವರ ಮನೆತನದ ಬಡತನ ಇದಕ್ಕೆ ಅಡ್ಡಿಯಾಯಿತು. ಹಾಗಾಗಿ ಓದನ್ನು ಅರ್ಧಕ್ಕೆ ನಿಲ್ಲಿಸಿ ಹಿಂತಿರುಗಿ ಮನೆಗೆ ಬರಬೇಕಾಯಿತು.

ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವಾಗಲೇ ಬಾಲಕ ಬಾಳಪ್ಪ ಮುಂದೆ ಒಳ್ಳೆಯ ಹಾಡುಗಾರನಾಗಬಲ್ಲ ಭವಿಷ್ಯವನ್ನು ಹೊಂದಿದ್ದನು. ಶಾಲೆಯಲ್ಲಿ ತನ್ನ ಕನ್ನಡ ಪಠ್ಯ ಪುಸ್ತಕದಲ್ಲಿರುವ ಎಲ್ಲಾ ಹಾಡುಗಳನ್ನೂ ಬಾಳಪ್ಪ ಸ್ವತಃ ರಾಗ ಸಂಯೋಜಿಸಿ ಮಧುರವಾಗಿ ಹಾಡುತ್ತಿದ್ದನು. ಇದರಿಂದಾಗಿ ಬಾಳಪ್ಪ ತನ್ನ ಬಾಲ್ಯಾವಸ್ಥೆಯಲ್ಲಿಯೇ ಎಲ್ಲರಿಗೂ ಪ್ರಿಯನಾಗಿದ್ದ. ತನ್ನ ಶಿಕ್ಷಕರು ಕರೆದು 'ಬಾಳಪ್ಪ ಒಂದು ಹಾಡು ಹೇಳು' ಎಂದರೆ ಸಾಕು, ಬಾಲಕ ಬಾಳಪ್ಪ ಒಲ್ಲೆ ಎನ್ನದೇ ಹಾಡು ಪ್ರಾರಂಭಿಸುತ್ತಿದ್ದನು. ತನ್ನ ವಾರಿಗೆಯ ಸ್ನೇಹಿತರು, ಗುರುಗಳು ಎಲ್ಲರೂ ಈತನ ಹಾಡಿನ ಮೋಡಿಗೆ, ಮಧುರ ಕಂಠಕ್ಕೆ ಮರುಳಾಗುತ್ತಿದ್ದರು. ಬಾಳಪ್ಪನ ಕಂಠದಲ್ಲಿ ಕೋಗಿಲೆಯೇ ಹುದುಗಿ ಕುಳಿತಿದೆ ಎಂದು ಕೀರ್ತಿಸುತ್ತಿದ್ದರು.

## ಸಂಗೀತದ ಶಿಕ್ಷೆ :

ಬಾಳಪ್ಪನವರಿಗೆ ಹಾಡಿನ ಪ್ರತಿಭೆ ಹುಟ್ಟಿನಿಂದಲೇ ಬಂದದ್ದು. ತಾಯಿ ಚೆನ್ನವೀರಮ್ಮ ಒಳ್ಳೆಯ ಜನಪದ ಹಾಡುಗಳನ್ನು ಹಾಡುತ್ತಿದ್ದರಂತೆ. ಹೀಗಾಗಿ ಬಾಳಪ್ಪನವರು ತಾಯಿಯ

ಮಡಿಲಿನಲ್ಲಿಯೇ ಜನಪದ ಗಾಯನದ ದೀಕ್ಷೆ ಪಡೆದರು. ಬಾಳಪ್ಪನವರ ದೊಡ್ಡಪ್ಪನವರೇ ಅವರ ಸಂಗೀತ ಶಿಕ್ಷಣದ ಮೊದಲ ಗುರು. ನಂತರ ಅದೇ ಊರಿನ ಶಿವಲಿಂಗಯ್ಯನ ಹತ್ತಿರ ಸಂಗೀತದ ಅಭ್ಯಾಸ ಮಾಡಿದರು.

ಬಾಳಪ್ಪನವರು ಹುಟ್ಟು ಪ್ರತಿಭಾವಂತರಾಗಿದ್ದರು. ಸಂಗೀತ ಅವರಿಗೆ ವರವಾಗಿ ದಕ್ಕಿತ್ತು. ಸಂಗೀತದ ಪ್ರತಿಭೆ ಇದ್ದವರಿಗೆ ಕಂಠದ ಸಿರಿಯೂ ದೈವದತ್ತವಾಗಿಯೇ ದೊರಕಿರುತ್ತದೆ. ಇಂಥವರಿಗೆ ಶಿಕ್ಷಣ ಎಂಬುದು ನೆಪ ಮಾತ್ರಕ್ಕೆ ಬೇಕಾಗುವ ತಿಳುವಳಿಕೆಯಾಗಿರುತ್ತದೆ. ಇದು ಬಾಳಪ್ಪನಂಥವರಿಗೆ ಸರಿಯಾಗಿ ಅನ್ವಯವಾಗುವ ಮಾತು. ಬಾಲ್ಯದಿಂದಲೂ ತನ್ನೆದುರಿಗೆ ಬಂದ ಹಾಡುಗಳಿಗೆ ಧಾಟಿ ಕೂಡಿಸಿ ಹಾಡುವ ಪರಿಪಾಠ ಬಾಳಪ್ಪನವರದಾಗಿತ್ತು. ಈ ಪ್ರತಿಭೆಗೆ ಸ್ವಲ್ಪ ಶಾಸ್ತ್ರೀಯ ಧಾರೆಯ ಅವಶ್ಯಕತೆಯಿತ್ತು.

ಮುರುಗೋಡಿನ ಸಂಗೀತಗಾರ ಶಿವಲಿಂಗಯ್ಯ ಅವರಿಗೆ ತಕ್ಕಮಟ್ಟಿನ ಶಾಸ್ತ್ರೀಯ ಸಂಗೀತದ ಜ್ಞಾನವಿತ್ತು. ತಮಗೆ ಒಬ್ಬ ಒಳ್ಳೆಯ ಶಿಷ್ಯ ದೊರೆತರೆ ಅವನಿಗೆ ಸಂಗೀತದ ಧಾರೆ ಎರೆಯಬೇಕೆಂಬ ಅಪೇಕ್ಷೆಯೂ ಅವರದಾಗಿತ್ತು. ಹೀಗೆ ತಮಗಿರುವ ವಿದ್ಯೆಯನ್ನು ಹೇಳಿಕೊಡಬೇಕೆಂಬ ಹಂಬಲ ಶಿವಲಿಂಗಯ್ಯನವರಿಗೆ ಇದ್ದರೂ ಅದಕ್ಕೆ ತಕ್ಕ ಪ್ರತಿಭೆ ಮತ್ತು ಆಸಕ್ತಿಯುಳ್ಳ ವಿದ್ಯಾರ್ಥಿ ದೊರಕದೇ ಚಡಪಡಿಸುತ್ತಿದ್ದರು. ಬಾಳಪ್ಪನವರಲ್ಲಿ ಸಂಗೀತದ ಪ್ರತಿಭೆ ಇತ್ತು. ಮಧುರವಾದ ಕಂಠದ ಸಿರಿಯೂ ಇತ್ತು. ಶಾಸ್ತ್ರೀಯ ಸಂಗೀತದ ಅಭ್ಯಾಸ ಮಾಡಬೇಕೆಂಬ ಹಂಬಲವಿತ್ತು. ಕೆಲ ಹಿರಿಯರ ಸೂಚನೆಯ ಮೇರೆಗೆ ಬಾಳಪ್ಪನವರು ಶಿವಲಿಂಗಯ್ಯನವರಲ್ಲಿಗೆ ಹೋಗಿ ತನಗೆ ಸಂಗೀತ ಹೇಳಿಕೊಡಬೇಕೆಂದು ವಿನಂತಿಸಿದರು. ಬಾಳಪ್ಪನ ಪ್ರತಿಭೆಯನ್ನು ಗುರುತಿಸಿದ ಶಿವಲಿಂಗಯ್ಯನವರು, ಅವನನ್ನು ಶಿಷ್ಯನನ್ನಾಗಿ ಸ್ವೀಕರಿಸಿ ಸಂಗೀತ ಹೇಳಿಕೊಡಲು ಪ್ರಾರಂಭಿಸಿದರು. ಗುರುವಿಗೊಬ್ಬ ತಕ್ಕ ಶಿಷ್ಯ, ಶಿಷ್ಯನಿಗೊಬ್ಬ ತಕ್ಕ ಗುರು- ಅವರವರ ಹುಡುಕಾಟಕ್ಕೆ ತಕ್ಕಂತೆ ಒಂದೇ ಕಡೆ ದೊರೆತಂತಾಯಿತು.

ಶಿವಲಿಂಗಯ್ಯನವರ ಹತ್ತಿರ ಅತ್ಯಂತ ಶ್ರದ್ಧೆಯಿಂದ ಬಾಳಪ್ಪನವರ ಸಂಗೀತದ ಅಭ್ಯಾಸ ನಡೆಯಿತು. ಹಾರ್ಮೋನಿಯಂ, ಸಿತಾರಗಳನ್ನು

ಕಲಿತರು. ಇವರ ಪಾಠಗಳು ಪ್ರತಿದಿನದ ನಸುಕಿನಲ್ಲಿಯೇ ನಡೆಯುತ್ತಿದ್ದವು. ಗುರುಗಳು ಹೇಳಿದ್ದನ್ನು ಬಾಳಪ್ಪ ಮರೆಯದೆ ಕಲಿಯುತ್ತಿದ್ದನು. ಶಿವಲಿಂಗಯ್ಯನವರಿಗೆ ಸಂಗೀತ ಕಚೇರಿ ನಡೆಸುವ ಅವಕಾಶಗಳು ಸಿಕ್ಕಾಗಲೆಲ್ಲ ಶಿಷ್ಯ ಬಾಳಪ್ಪನನ್ನು ಸಂಗಡ ಕರೆದೊಯ್ಯುತ್ತಿದ್ದರು. ಜೊತೆಗೆ ಧ್ವನಿಗೂಡಿಸಲು, ನಡುನಡುವೆ ಹಾಡಲು ಅವಕಾಶ ಮಾಡಿಕೊಡುತ್ತಿದ್ದರು. ಇದರಿಂದ ಬಾಳಪ್ಪನವರಿಗೆ ವೇದಿಕೆಯಲ್ಲಿ ಹಾಡುವ ಕಲೆಗಾರಿಕೆ, ಸಭಿಕರ ಅಭಿರುಚಿಯನ್ನರಿಯುವ ಅವಕಾಶಗಳು ದೊರೆತವು. ಹೀಗೆ ಹತ್ತಾರು ವರ್ಷಗಳವರೆಗೆ ಬಾಳಪ್ಪನವರ ಸಂಗೀತದ ಅಭ್ಯಾಸ ನಡೆಯಿತು. ಶಿವಲಿಂಗಯ್ಯನವರಷ್ಟೇ ಬಾಳಪ್ಪನೂ ಹಿಂದುಸ್ಥಾನೀ ಶಾಸ್ತ್ರೀಯ ಸಂಗೀತದಲ್ಲಿ ನುರಿತವನಾದನು.

## ಜಾನಪದ ಹಾಡುಗಾರಿಕೆಯ ದೀಕ್ಷೆ :

ಮುಂದೆ ಶಾಸ್ತ್ರೀಯ ಸಂಗೀತದ ಅಭ್ಯಾಸ ಮಾಡಲು ಊರು ಬಿಟ್ಟು ಬೇರೆ ಕಡೆ ಹೋಗಬೇಕಾದ ಪರಿಸ್ಥಿತಿ ಬಂತು. ಶಿಕ್ಷಣದಲ್ಲಿ ಆದಂತೆ ಇಲ್ಲಿಯೂ ಕೂಡಾ ಬಾಳಪ್ಪನವರ ಆರ್ಥಿಕ ಸ್ಥಿತಿ ಅನುಕೂಲ ಮಾಡಿಕೊಡಲಿಲ್ಲ. ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತದ ಅಭ್ಯಾಸವನ್ನು ಮುಂದುವರಿಸಿದ್ದರೆ ಬಾಳಪ್ಪನವರು ಒಬ್ಬ ಶ್ರೇಷ್ಠ ಶಾಸ್ತ್ರೀಯ ಸಂಗೀತಗಾರರಾಗಬಹುದಿತ್ತು. ತಾನು ಮಲ್ಲಿಕಾರ್ಜುನ ಮನಸೂರರಂತೆ ದೊಡ್ಡ ಸಾಧನೆ ಗಳಿಸಬಹುದಿತ್ತು ಎಂಬ ಕೊರಗು ಕೊನೆಯವರೆಗೂ ಬಾಳಪ್ಪನವರಲ್ಲಿ ಇತ್ತಂತೆ. ಆದರೆ ಧಾರವಾಡದ ಮೃತ್ಯುಂಜಯ ಸ್ವಾಮಿಗಳು, ಶಿ.ಶಿ. ಬಸವನಾಳರು, ಬುದ್ಧಯ್ಯ ಪುರಾಣಿಕರು ಇವರೆಲ್ಲರೂ ಬಾಳಪ್ಪನನ್ನು ಜಾನಪದ ಹಾಡುಗಾರಿಕೆ ಮುಂದುವರಿಸಲು ಮೇಲಿಂದ ಮೇಲೆ ಒತ್ತಾಯಿಸಿದರಂತೆ. ಇದರಿಂದಾಗಿ ಈ ಎಲ್ಲಾ ಹಿರಿಯರ ಸಲಹೆಯನ್ನು ಮನ್ನಿಸಿ ಬಾಳಪ್ಪನವರು ಜಾನಪದ ಹಾಡುಗಾರಿಕೆಯನ್ನು ಮುಂದುವರಿಸಿದರಂತೆ. ಲಘು ಸಂಗೀತ, ಸುಗಮ ಸಂಗೀತಗಳನ್ನು ರೂಢಿಸಿಕೊಂಡರಂತೆ. ಮನೆತನದ ಅನಾನುಕೂಲತೆಯ ಕಾರಣವಾಗಿ, ಮೃತ್ಯುಂಜಯ ಸ್ವಾಮಿಗಳಂತಹ ಹಿರಿಯರ ಗೌರವಕ್ಕಾಗಿ

ಬಾಳಪ್ಪನವರು ಜಾನಪದ ಹಾಡುಗಾರಿಕೆಗೆ ಒಲಿದದ್ದು ಒಂದು ದೊಡ್ಡ ಯೋಗವೆಂದೇ ಹೇಳಬೇಕು.

## ೨

## ಬದಲಾದ ಬದುಕಿನ ದಾರಿಯಗುಂಟ

ಬಾಳಪ್ಪನವರು ತಮ್ಮ ಉಪಜೀವನಕ್ಕಾಗಿ ಪಟ್ಟಪಾಡು ಕಷ್ಟನಷ್ಟಗಳು ಅನಂತ. ಬದುಕು ಸಾಗಲು ಕಾಗದದ ಹೂಗಳನ್ನು ಮಾಡಿ ಮಾರಿದ ಘಟನೆಗಳೂ ಇವೆ. ಮುರಗೋಡದಿಂದ ಆರು ಕಿಲೋಮೀಟರ್ ದೂರದ ಬೈಲಹೊಂಗಲ ಸಂತೆ ಶುಕ್ರವಾರ. ನಡೆದೇ ಹೋಗುವ ಬಾಳಪ್ಪ ತಲೆಯ ಮೇಲೆ ಬೆಲ್ಲ ಹೊತ್ತು ಬರುತ್ತಿದ್ದ. ಬುಧವಾರ ತಮ್ಮೂರಿನ ಸಂತೆ. ಅಲ್ಲಿ ಬೆಲ್ಲದ ವ್ಯಾಪಾರ. ಹೀಗೆ ಅನೇಕ ದಿನಗಳವರೆಗೆ ತಲೆಯ ಮೇಲೆ ಬೆಲ್ಲ ಹೊತ್ತು ಮಾರಿ ಉಪಜೀವನ ಸಾಗಿಸಿದ ಹಾಡುಗಾರ ಹುಕ್ಕೇರಿ ಬಾಳಪ್ಪ.

ಇಂತಹ ಕಷ್ಟದ ಜೀವನ ಸಾಗಿಸುತ್ತಲೇ ಕರೆ ಬಂದಾಗ ಸಂಗೀತ ಸೇವೆಗಾಗಿ ಧಾವಿಸುತ್ತಿದ್ದ. ಮೊದಮೊದಲಿಗೆ ಅವರ ಕ್ಷೇತ್ರ ಕೇವಲ ಬೆಳಗಾಂವ ಮತ್ತು ಧಾರವಾಡ ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿತ್ತು. ಹೀಗೆ ಹಾಡುತ್ತ ತಿರುಗುವ ಬಾಳಪ್ಪನವರಿಗೆ ವಯಸ್ಸಾಗತೊಡಗಿತು. ಇದ್ದೊಬ್ಬ ಮಗನಿಗೆ ಮದುವೆ ಮಾಡಿ ಮೊಮ್ಮಕ್ಕಳನ್ನು ಕಾಣಬೇಕೆಂಬ ಬಯಕೆ ತಾಯಿಯಲ್ಲಿ ಕಾಣಿಸಿಕೊಂಡಿತು. ಕಂಡ ಕಂಡವರಿಗೆಲ್ಲ 'ಬಾಳನಿಗೊಂದು ಹೆಣ್ಣು ನೋಡಿ' ಎಂದು ತಾಯಿ ಬಾಯಿಬಿಟ್ಟಳು. ಹಾಡುತ್ತ ಊರೂರು ತಿರುಗುವವನಿಗೆ ಯಾರು ಮಗಳನ್ನು ಕೊಟ್ಟು ಸಂಕಟ ತಂದುಕೊಳ್ಳಬೇಕು? ಹೆಣ್ಣು ಕೊಡಲು ಯಾರೂ ಮುಂದೆ ಬರಲಿಲ್ಲ.

ಒಬ್ಬ ಕಲಾಕಾರನ, ಅದಕ್ಕಿಂತ ಮುಖ್ಯವಾಗಿ-ಸಾಮಾನ್ಯ ಜನರಿಗೆ ಬೇಕಾದ ಒಬ್ಬ ಜನಪ್ರಿಯ ಹಾಡುಗಾರನ ಕಷ್ಟನಷ್ಟಗಳನ್ನು, ಬದುಕನ್ನು ಎದುರಿಸುವ ಲವಲವಿಕೆ ಮೋಜುಗಳನ್ನು ಗಮನಿಸುವುದು ಅಷ್ಟೇ ಮುಖ್ಯ ಸಂಗತಿ. ಏಕೆಂದರೆ ಒಬ್ಬ ಕಲಾವಿದ ಎದುರಿಸುವ ಆತಂಕ-ಅವಮಾನಗಳು, ಮಾನ-ಸನ್ಮಾನಗಳು ಮುಖ್ಯವಾಗಿ ಅವನ

ಪ್ರತಿಭೆಯನ್ನನುಸರಿಸಿಯೇ ಬರುತ್ತವೆ. ಅದಕ್ಕಾಗಿ ಅವನ ಬದುಕಿನ ದಿಕ್ಕೆಂದರೆ ಅವನ ಪ್ರತಿಭೆ ಕೊಂಡೊಯ್ಯುವ ಮಾರ್ಗವೇ ಆಗಿರುತ್ತದೆ. ಆದರೆ ಈ ಕಲಾಕಾರರಿಗೆ ಬೆನ್ನು ಹತ್ತಿದ ಸಂಪತ್ತಿನ ದರಿದ್ರತನದಿಂದಾಗಿ ಇವರ ಬಾಳು ಅನೇಕ ಕಷ್ಟನಷ್ಟಗಳಿಗೆ ಈಡಾಗುತ್ತಿರುತ್ತದೆ. ಅಂತಹ ಸಂಗತಿಗಳು ಬಾಳಪ್ಪನವರ ಜೀವನದಲ್ಲೂ ಬಂದು ಹೋಗಿವೆ. ಅವರ ಕನ್ಯಾನ್ವೇಷಣೆಯ ಸಂಗತಿಯೊಂದು ಅವರ ಜೀವನದಲ್ಲಿ ನಮಗೆ ಕೇಳಲು ಮೋಜಿನ ಸಂಗತಿಯಂತೆ ತೋರುತ್ತದೆ. ಆದರೆ ಆ ಪ್ರತಿಭಾವಂತ ಕಲಾಕಾರನಿಗೆ ಒದಗಿದ ಅವಮಾನ, ಅದರಿಂದ ಅವನ ತಾಯಿ ಸಹಿಸಿದ ಸಂಕಟ, ಪಟ್ಟ ಮಾನಸಿಕ ಯಾತನೆ - ಇಂದು ಸ್ಮರಿಸಿಕೊಳ್ಳಲೂ ದುಸ್ಸಾಧ್ಯವೆನಿಸುತ್ತದೆ. ತಮ್ಮ ಮದುವೆಗಾಗಿ ನಡೆಸಿದ ಕನ್ಯಾನ್ವೇಷಣೆಯ ಸ್ಮೃತಿಗಳನ್ನು ಹಾಸ್ಯ ಪ್ರವೃತ್ತಿಯ ಬಾಳಪ್ಪನವರು ಬಲು ಮೋಜಿನಿಂದಲೇ ಹೇಳಿಕೊಂಡಿದ್ದಾರೆ.

**ಪ್ರಸಂಗ ೧:** ''ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ 'ಹೂಲಿ' ಎಂಬಲ್ಲಿ ಒಂದು ಕನ್ಯ ಇರುವುದು ಗೊತ್ತಾಗಿ ನೋಡಲು ಹೋದರು. 'ಆ ಹುಡುಗಿ ಕತ್ತಲಗಿಂತ ಕಪ್ಪು ಇದ್ದಳ್ರಿ. ಮುಖದಾಗಿನ ಎರಡು ಕಣ್ಣೊಂದ ಬೆಳ್ಳಗ್ರಿ. ಉಳಿದದ್ದೆಲ್ಲ ಅಮಾಸಿ ಕತ್ತಲ್ರಿಪಾ' ಎಂದು ಈಗಲೂ ನಗುತ್ತ ಹೇಳುತ್ತಾರೆ ಬಾಳಪ್ಪನವರು. ಆಗಿನ ಕಾಲದಲ್ಲಿ ಹೆಣ್ಣು ಸಿಗುವುದು ಕಠಿಣವಿದ್ದುದರಿಂದ ಆ ಕಪ್ಪಗಿನ ಕನ್ಯೆಯನ್ನೇ ಮದುವೆಯಾಗಲು ಬಾಳಪ್ಪ ಒಪ್ಪಿದ. ಆದರೆ ಹೆಣ್ಣಿನ ತಂದೆ-ತಾಯಿಗಳು 'ಹುಡುಗನೇನೋ ಬುದ್ಧಿವಂತ, ಒಳ್ಳೇ ಮನೆತನ. ಎಲ್ಲಾ ಬರೋಬರಿ. ಆದರ ಹಾಡಿಕೊಂಡ ಅಡ್ಡಾಡಾಂವಗ ಹ್ಯಾಂಗ ಕೊಡೋದು ಮಗಳ್ನ' ಎಂದು ಸಬೂಬು ಹೇಳಿ ಹೆಣ್ಣನ್ನು ಕೊಡಲು ನಿರಾಕರಿಸಿದರು.''[೧]

**ಪ್ರಸಂಗ ೨:** ''ಕೆಲವು ತಿಂಗಳು ಕಳೆದ ಮೇಲೆ ಕನ್ಯ ನೋಡಲು ಬಾಳಪ್ಪನಿಗೆ ಮತ್ತೊಂದು ಕಡೆಯಿಂದ ಕರೆ ಬಂದಿತು. ಹೆಣ್ಣು ನೋಡಿದ್ದನ್ನು ಬಾಳಪ್ಪನವರ ಬಾಯಿಂದಲೇ ಕೇಳಬೇಕು. 'ನಾನು ಮೊದಲು ನೋಡಿದ ಹುಡುಗಿ ಕಪ್ಪ ಇದ್ದರೂ ಜರ ಲಕ್ಷಣ ಇದ್ದಳ್ರಿ. ಈ ಹುಡುಗಿ ಕಪ್ಪ ಅಷ್ಟ ಅಲ್ರಿ, ಕುರೂಪಿ ಕೂಡಾ ಆಗಿದ್ದಳು.

---

೧. ಸಾಹಿರ ಹಾಡಿನ ಸರದಾರ, ಪು. 20.

ಹುಟ್ಟಿದಾರಭ್ಯ ಅಂಥ ಹೆಣ್ಣು ನೋಡಿದ್ದು ಅದೇ ಮೊದಲು, ಅದೇ ಕಡೇದು. ಮನಸ್ಯಾರ ಗೊಡವಿ ಬಿಡ್ರಿ, ರಾಕ್ಷಸರು ಸೈತ ಆಕೆನ್ನ ಮದವಿ ಆಗಾಕಿಲ್ಲ. ಆದರೂ ಅಂತಹ ಹೆಣ್ಣ ನಾ ಒಪ್ಪಿದ್ನಿರಿ. ಆಗಿನ ಕಾಲದಾಗ ನನ್ನಂಥವನಿಗೆ ಯಾರು ಹೆಣ್ಣು ಕೊಡ್ತಾರ ಅನ್ನೋ ಭಯ. ಮ್ಯಾಲ ನಮ್ಮ ಅವ್ವಂದು ಕಾಟ. ಹಿಂಗಾಗಿ ನಾನು ಒಪ್ಪಬೇಕಾತ್ರಿ. ನಾ ಒಪ್ಪಿದ್ದ ನೋಡಿ ನಮ್ಮವ್ವ ಹಿಗ್ಗಿ ಹೀರೇಕಾಯಿ ಆದಳ್ರಿ. ಇನ್ನೇನು ಮನೆಗೆ ಸೊಸಿ ಬಂದಬಿಡ್ತಾಳ ಅನ್ನು ಕನಸ ಕಾಣಾಕ ಹತ್ತಿದ್ಲು. ಆದರ ಮಜಾ ಹೇಳ್ತೀನ್ರಿ, ಅಂತಹ ಹುಡುಗೀನೂ ಸಿಗಬಾರ್ದ ನನಗ, 'ಹಾಡಕೋತ ದೇಶ ತಿರಗಾಂಗವಗ ನಾವು ಮಗಳ್ನ ಕೊಡುದಿಲ್ಲರಿ ಬ್ಯಾರೆ ಕಡಿ ನೋಡಲಿ' ಎಂದು ಹೇಳಿ ಕಳಿಸಿದರು.''೨

ಈ ಮಾತುಗಳಲ್ಲಿ ಒಬ್ಬ ಕಲಾವಿದನ ಬದುಕಿನ ವ್ಯಥೆಯಿದೆ. ಆದರೆ ಬಾಳಪ್ಪ ಅದನ್ನು ಎಷ್ಟು ರಂಜನೀಯವಾಗಿ ಹೇಳಿಕೊಂಡಿದ್ದಾನೆಂಬುದನ್ನು ಗಮನಿಸಿದರೆ ಅವರ ಹಾಸ್ಯ ಪ್ರವೃತ್ತಿ, ಬದುಕನ್ನು ಸ್ವೀಕರಿಸಿದ ರೀತಿಗಳು ಗಮನಕ್ಕೆ ಬರುತ್ತವೆ.

ಹಡೆದ ತಾಯಿ ಮಗನ ಮದುವೆಯಾದರೆ ಸಾಕು ಎಂಬ ಹಂಬಲ ಹೊತ್ತದ್ದು ತನ್ನ ಸುಖಕ್ಕಾಗಿ ಎಂದೇ ಬಾಳಪ್ಪ ಭಾವಿಸುತ್ತಾರೆ. ಬಾಳಪ್ಪನೇನೋ ಈ ಎಲ್ಲ ಪ್ರಸಂಗಗಳನ್ನು ಲಘುವಾಗಿ ಗಣಿಸಿರಬೇಕು. ಆದರೆ ತಾಯಿಯ ಜೀವ ಮಾತ್ರ ತಳಮಳಿಸಿತು. ''ಹುಕ್ಕೇರಿ ಮನೆತನಕ ದೀಪ ಹಚ್ಚಾಕ ಜ್ಯೋತಿ ಇಲ್ಲದಂಗಾತು'' ಎಂದು ಕೊರಗತೊಡಗಿದಳು. ಈ ಸಂಕಟಗಳು ಬಂದುದು 'ಹಾಡುವ ಹುಡುಗ' ಎಂಬ ಕಾರಣಕ್ಕಾಗಿಯೇ ಎಂಬುದನ್ನೂ ಇಲ್ಲಿ ಮುಖ್ಯವಾಗಿ ಗಮನಿಸಬೇಕು.

ಅಥಣಿ ಮಠದಲ್ಲಿ ಬಾಳಪ್ಪನವರ ಹಾಡುಗಾರಿಕೆ ಕಾರ್ಯಕ್ರಮವಿದ್ದ ಒಂದು ದಿನ- ಸುತ್ತಹಳ್ಳಿಯ ಜನ ಕಿಕ್ಕಿರಿದು ನೆರೆದಿತ್ತು. ಸಹಜವಾಗಿಯೇ ಎಂದಿನಂತೆ ಬಾಳಪ್ಪ ತನ್ನ ಕಂಠಸಿರಿಯಿಂದ ಜನರನ್ನು ದಂಗು ಬಡಿಸಿದ. ಅಂದಿನ ಆ ಸಂಗೀತ ಕಚೇರಿಗೆ ಶ್ರೋತೃವಾಗಿ ಕೃಷಿ ಇಲಾಖೆಯ ಉಪನಿರ್ದೇಶಕರಾದ ಶ್ರೀ ವಿ.ಸಿ. ಪಾವಟೆ ಅವರು ಹಾಜರಾಗಿದ್ದರು. ಅವರಿಗೆ ಸುಧಾರಿತ ಬೇಸಾಯ, ಬೆಳೆ, ಗೊಬ್ಬರಗಳ ಬಗ್ಗೆ ಹಳ್ಳಿಯ ರೈತರಿಗೆ ತಿಳಿಸಿ ಹೇಳುವ ಪ್ರಚಾರಕರೊಬ್ಬರು ಬೇಕಾಗಿದ್ದರು. ಬಾಳಪ್ಪನ

೨. ಪುಟ 20-21

ಹಾಡಿನ ಮೋಡಿಗೆ, ಮಾತಿನ ಶೈಲಿಗೆ ಶ್ರೀ ಪಾವಟೆ ಅವರು ಪ್ರಭಾವಿತರಾದರು. ಸಭೆ ಮುಗಿದ ನಂತರ ಬಾಳಪ್ಪನವರನ್ನು ಕರೆದು ಮಾತನಾಡಿಸಿ, ಅವರ ಹಾಡುಗಾರಿಕೆ ಬಗ್ಗೆ ತಮ್ಮ ಪ್ರಶಂಸೆಯನ್ನು ವ್ಯಕ್ತಪಡಿಸಿದರು. ಜೊತೆಗೆ ಕೃಷಿ ಇಲಾಖೆಯಲ್ಲಿ ಪ್ರಚಾರಕ ಹುದ್ದೆಗೆ ಸೇರುವ ಬಗ್ಗೆ ಆಮಂತ್ರಣವಿತ್ತರು.

ಶ್ರೀ ಪಾವಟೆ ಅವರ ಮಾತುಗಳಿಂದ ಬಾಳಪ್ಪ ಖುಷಿಗೊಂಡ. ಅವರು ಸರಕಾರಿ ನೌಕರಿಯ ಮಾತನಾಡಿದಾಗ ಮರಳುಗಾಡಿನಲ್ಲಿ ಸುದೀರ್ಘವಾಗಿ ಚಲಿಸಿ ಬಾಯಾರಿದವನಿಗೆ ಒಮ್ಮೆಗೆ ಒಯಸಿಸ್ ಕಾಣಿಸಿಕೊಂಡಂತಾಯಿತು. ಬದುಕಿಗೆ ಆಶ್ರಯವಿಲ್ಲದೆ ಎತ್ತೆತ್ತಲೋ ಸಾಗುತ್ತಿರುವ ತನ್ನ ಬಾಳಿಗೆ ತಾನೇ ಅರಸಿಕೊಂಡು ಬಂದ ಅವಕಾಶಕ್ಕೆ ಬಾಳಪ್ಪ 'ಆಗಲ್ರೀಯಪ್ಪ' ಎಂದು ಒಂದೇ ಮಾತಿಗೆ ಒಪ್ಪಿಕೊಂಡ. ಪಾವಟೆಯವರು ಬಾಳಪ್ಪನವರಿಗೆ ಒಂದು ಸರಕಾರಿ ನೌಕರಿ ಕೊಡಿಸಿ ಪುಣ್ಯ ಕಟ್ಟಿಕೊಂಡರು. ತಮ್ಮ ಇಲಾಖೆಗೆ ಒಬ್ಬ ಸಮರ್ಥ ಪ್ರಚಾರಕನನ್ನು ತಂದುಕೊಂಡರು. ಈ ಮಾತು ತಾಯಿ ಎದುರಿಗೆ ಹೇಳಿದಾಗ ಆಕೆಯ ಸಂತೋಷಕ್ಕೆ ಪಾರವೇ ಇಲ್ಲದಂತಾಯಿತು.

ತಮಗೆ ಕೃಷಿ ಇಲಾಖೆಯಲ್ಲಿ 'ಪ್ರಚಾರಕ' ಹುದ್ದೆ ದೊರೆತ ನಂತರ ಬಾಳಪ್ಪನವರ ಜೀವನದ ದಾರಿಯ ದಿಕ್ಕೇ ಬದಲಾಯಿತು. ಹೊಟ್ಟೆ ಬಟ್ಟೆಗೊಂದು ಖಾಯಂ ಆಧಾರ ಸಿಕ್ಕಂತಾಯಿತು. ಈಗಾಗಲೇ ಕಾಗದದ ಹೂ ತಯಾರಿಸಿ ಮಾರುವುದರಿಂದ ಹಿಡಿದು, ಬೆಲ್ಲ ಮಾರುವ ಕಸುಬುಗಳೆಲ್ಲ ಮುಗಿದುಹೋಗಿದ್ದವು. ಕೊನೆಗೆ ಸ್ನೇಹಿತರ ಸಹಾಯದೊಂದಿಗೆ ಒಂದು ನಾಟಕ ಕಂಪನಿಯನ್ನೂ ತೆರೆದು ಎಂಟು ವರ್ಷಗಳವರೆಗೆ ಪ್ರಯೋಗ ನಡೆಸಿದ್ದೂ ಆಯಿತು. ಊರೂರು ತಿರುಗಿ ಸಂಗೀತದ ಕಾರ್ಯಕ್ರಮಗಳನ್ನು ಕೊಟ್ಟುದೂ ಆಯಿತು. ಪರಿಶ್ರಮ ಮತ್ತು ಪ್ರತಿಭೆಗಳನ್ನು ದುಡಿಸಿಕೊಂಡರೂ ಹೊಟ್ಟೆಗೊಂದಿಷ್ಟು ಆಧಾರ ಇಲ್ಲದಂತಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಮತ್ತೆ ಅವರ ಹಾಡುಗಾರಿಕೆಯ ಪ್ರತಿಭೆಗಾಗಿಯೇ ಸರಕಾರಿ ನೌಕರಿ ದೊರೆತಂತಾಯಿತು.

ಈ ನೌಕರಿ ದೊರೆತದ್ದು ಬಹುಶಃ 1942ರಲ್ಲಿ ಎಂದು ತೋರುತ್ತದೆ. ಅದರೆ ಬಾಳಪ್ಪನವರಿಗೆ ಈಗ 31 ಅಥವಾ 32ರ ಹರೆಯ. ಈ ವಯಸ್ಸು

ಮಕ್ಕಳ ಕಾಣುವ ವಯಸ್ಸು. ಇನ್ನೂ ಮಗನ ಮದುವೆಗೊಂದು ಹೆಣ್ಣು ದೊರೆಯಲಿಲ್ಲವೆಂದರೆ ಯಾವ ತಾಯಿಗೆ ನೆಮ್ಮದಿ ಕೆಡಲಿಕ್ಕಿಲ್ಲ? ಬಾಳಪ್ಪನವರ ತಾಯಿ 'ಹುಕ್ಕೇರಿ ಮನೆತನಕ್ಕೊಂದು ದೀಪ ಹಚ್ಚಲು ಕುಡಿಯಿಲ್ಲದಂತಾಯಿತು' ಎಂದು ಕೊರಗಿರುವುದರಲ್ಲಿ ಆಶ್ಚರ್ಯವೇನಿಲ್ಲ.

ಬಾಳಪ್ಪನವರ ಬಾಳಿನಲ್ಲಿ ಎಲ್ಲ ರೀತಿಯ ತಿರುವು ಬಂದುದು 'ಪ್ರಚಾರಕ' ಹುದ್ದೆ ಸಿಕ್ಕ ನಂತರವೆ. ಮೊದಲಿನ ಜೀವನದ ದೈನೇಶಿತನವೂ ದೂರಾದಂತಾಯಿತು. ಈಗ ಬಾಳಪ್ಪನವರಿಗೆ ಹೆಣ್ಣು ಕೊಡಲು ನಾ ಮುಂದು ತಾ ಮುಂದು ಎಂದು ಅನೇಕ ಜನ ದುಂಬಾಲು ಬೀಳಲು ಪ್ರಾರಂಭಿಸಿದರಂತೆ.

ತಮ್ಮ ಇಲಾಖೆಯ ಪ್ರಚಾರದ ಕಾರ್ಯಕ್ರಮಕ್ಕೆಂದು ಬಿಜಾಪುರ ಜಿಲ್ಲೆಯ ಮುದ್ದೇ ಬಿಹಾಳಕ್ಕೆ ಒಂದು ಸಲ ಭೇಟಿಕೊಟ್ಟರಂತೆ. ಅಲ್ಲಿಯ ಕಾರ್ಯಕ್ರಮ ಮುಗಿದ ನಂತರ ಆ ಊರಿನ ಒಬ್ಬ ಹಿರಿಯರ ಮನೆಗೆ ಊಟಕ್ಕೆಂದು ಕರೆದುಕೊಂಡು ಹೋದರು. ಮಾತಿಗೆ ಮಾತು ಬೆಳೆದು, ಬಾಳಪ್ಪನಿಗೆ ಮದುವೆಯಾಗಿಲ್ಲ ಎಂಬ ವಿಷಯ ಆ ಊರಿನ ಹಿರಿಯರ ಗಮನಕ್ಕೆ ಬಂದಿತು. ಇಂತಹ ಒಳ್ಳೆಯ ಹಾಡುಗಾರನನ್ನು ತಮ್ಮೂರಿನ ಅಳಿಯನನ್ನಾಗಿಸಿಕೊಳ್ಳಬೇಕೆಂಬ ಹುರುಪಿನಿಂದ ಬಾಳಪ್ಪನವರಿಗೆ ಕೇಳಿ, ಒಪ್ಪಿಸಿದರಂತೆ. ಎರಡ್ಮೂರು ಮನೆಯಲ್ಲಿ ಕನ್ಯಗಳನ್ನೂ ತೋರಿಸಿದರಂತೆ. ಬಾಳಪ್ಪನ ಭಾಗ್ಯದ ಬಾಗಿಲು ತೆರೆಯಿತು. ಅವರಿಗೆ ಅನುರೂಪಳಾದ ಹೊನವಾಡ ವೀರಪ್ಪನವರ ಮಗಳು ಶಾಂತವ್ವ ಮನಸ್ಸಿಗೆ ಬಂದಳು. ಊರ ಜನರ ಒತ್ತಾಯದ ಮೇರೆಗೆ ವೀರಪ್ಪನವರು ಮಗಳನ್ನು ಬಾಳಪ್ಪನಿಗೆ ಕೊಡಲು ಒಪ್ಪಿದರು. ''ಚೆಂದುಳ್ಳಿ ಹೆಣ್ಣು ಕೈ ಹಿಡಿಯುವ ಭಾಗ್ಯ ನನಗೂ ಬಂತು'' ಎಂದು ಬಾಳಪ್ಪ ಹಿರಿ ಹಿರಿ ಹಿಗ್ಗಿದ. ಈ ಉದ್ಗಾರ ಅವರು ಹಿಂದೆ ನೋಡಿದ ಕನ್ಯಯರ ರೂಪ ನೆನೆಸಿಕೊಂಡೂ ಇರಬೇಕು. ಅಂಥವರನ್ನು ಒಪ್ಪಿದಾಗಲೂ ತನಗೆ ಮದುವೆಯಾಗುವ ಭಾಗ್ಯ ಬರಲಿಲ್ಲವೆಂಬ ತನ್ನ ಸ್ಥಿತಿಯನ್ನು ನೆನೆದು, ತನ್ನ ಬದುಕು ಇನ್ನು ಬದಲಾಯಿಸಿತು ಎಂಬ ಧನ್ಯತೆಯ ಭಾವದಿಂದಲೂ ಈ ಉದ್ಗಾರ ಬಂದಿರಬಹುದು. ಬಾಳಪ್ಪನವರೇ ಇಷ್ಟೊಂದು ಖುಷಿ ಪಟ್ಟರೆ, ಮಗನಿಗೊಂದು ಹೆಣ್ಣು ಸಿಗಲಿಲ್ಲವೆಂದು

ಆಂತಕಪಟ್ಟುಕೊಂಡು, ಬಹಳ ದಿನಗಳವರೆಗೆ ಮರುಗಿದ ತಾಯಿಯ ಖುಷಿ ಎಂತಾಗಿರಬೇಕು? ಊರಿಗೆ ಹೋದವನೇ ಬಾಳಪ್ಪ ''ಯವ್ವಾ ಮುದ್ದೇ ಬಿಹಾಳದ ಹೊನವಾಡ ವೀರಪ್ಪನವರು ತನ್ನ ಮಗಳು ಶಾಂತವ್ವನನ್ನು ನನಗೆ ಕೊಡಾಕ ಒಪ್ಯಾರ'' - ಎಂದಾಗ ಅವರ ತಾಯಿ ಸಂತೋಷದಿಂದ ಉಬ್ಬಿ ಹೋದಳು. ಮುಗಿಲು ಮೂರೇ ಗೇಣು ಉಳಿಯಿತು. 'ಬಾಳ ಚಲೋ ಆತು. ಎಲ್ಲಾ ಆ ಮಹಂತೇಶನ ಕೃಪಾ. ಅವರ ಕಡೆಯಿಂದ ಒಂದು ದುಡ್ಡೂ ವರದಕ್ಷಿಣೆ ತೊಗೊಳ್ಳದಂಗ ಮದವಿ ಆಗಬೇಕು' ಎಂದು ಹರಸಿದಳು. ತಾಯಿಯ ಮಾತನ್ನು ನಡೆಸಿಕೊಟ್ಟ ಬಾಳಪ್ಪ.''

ಇದು ಮನುಷ್ಯನ ಬದುಕಿನಲ್ಲಿ ಕಾಣುವ ಅಪರೂಪದ ಅನುಭವ. ಮಗ ಪ್ರತಿಭಾವಂತನಾಗಿಯೂ ತಾಯಿ-ಮಗ ಅನುಭವಿಸಿದ ಪರದೇಶಿತನ-ಬಡತನದ ಕೊಡುಗೆ. ಆದರೆ ಅವರ ಹೃದಯ ಶ್ರೀಮಂತಿಕೆ ಎಂತಹದೆಂದರೆ - ತಾಯಿ ವರದಕ್ಷಿಣೆ ಬೇಡ ಎಂದರೆ, ಮಗನು ತಾಯಿಯ ಮಾತನ್ನು ಪಾಲಿಸಿ ತೋರಿಸುತ್ತಾನೆ. ಅದಕ್ಕಾಗಿ ಇದೊಂದು ಮಾದರಿಯ ಸಂಬಂಧವೆಂದೇ ಹೇಳಬೇಕಾಗುತ್ತದೆ. ಬದುಕಿನಲ್ಲಿ ಎದುರಾಗುವ ಸಣ್ಣ ಅವಕಾಶಗಳೂ ಹೇಗೆ ಇಡೀ ಬದುಕಿನ ಬಣ್ಣವನ್ನೇ ಬದಲಾಯಿಸುತ್ತವೆ ಎಂಬುದಕ್ಕೆ ಬಾಳಪ್ಪನವರಿಗೆ ದೊರೆತ ಸಣ್ಣ ನೌಕರಿ ಉದಾಹರಣೆಯಾಗಿ ನಿಲ್ಲುತ್ತದೆ.

# ೩

## ಮಾತನಾಡಲು ಬಾಯಿ ಹಾಡಲು ಕಂಠ

ಬಾಳಪ್ಪನವರು ತಮಗೊದಗಿದ ಸಂಗೀತ ಜ್ಞಾನದ ಸಹಾಯದಿಂದ ಜನಪ್ರಿಯ ಹಾಡುಗಾರಿಕೆಗೊಂದು ಶಿಸ್ತನ್ನು ತಂದುಕೊಂಡರು. ಈ ಹಾಡುವ ಪ್ರವೃತ್ತಿಯಿಂದಲೇ ಹಳ್ಳಿಯಿಂದ ದಿಲ್ಲಿಯವರೆಗೆ ಪ್ರಸಿದ್ಧರಾದರು. ಬದುಕಿನಲ್ಲಿ ಉಂಡರು, ಉಟ್ಟರು. ಹೆಂಡತಿ, ಮಕ್ಕಳನ್ನು (ಆರು ಜನ) ಪಡೆದರು. ಬಾಳಪ್ಪನವರ ಹಾಡುಗಾರಿಕೆಯ ಬದುಕನ್ನು ಸರಿಯಾಗಿ ಸೀಳಿ ಎರಡು ಭಾಗಗಳಲ್ಲಿ ತೋರಿಸಬಹುದು. ಒಂದು ಸರಕಾರಿ ನೌಕರಿ ದೊರೆಯುವವರೆಗಿನ ಕಷ್ಟದ ಕಾಲ, ಎರಡನೇದು ನೌಕರಿಯ ನಂತರದ ಬೆಳವಣಿಗೆಯ ಕಾಲ. ಕಷ್ಟದ ಕಾಲದಲ್ಲಿ ಹಳ್ಳಿ ಹಳ್ಳಿಗೆ ಹಾಡುತ್ತ ತಿರುಗಿ ಕೊಟ್ಟಷ್ಟನ್ನು ಪಡೆದರು. ಖಾಲಿ ವೇಳೆಯಲ್ಲಿ ಉಪಜೀವನಕ್ಕಾಗಿ - ಕಾಗದದ ಹೂ ಮಾರುವ, ಸಂತಿ ಸಂತಿ ತಿರುಗಿ ತಲೆಯ ಮೇಲೆ ಬೆಲ್ಲ ಹೊತ್ತು ಮಾರುವ, ನಾಟಕ ಕಂಪನಿ ತೆರೆದು ಎಂಟು ವರ್ಷ ನಡೆಸಿ ಸ್ವಾತಂತ್ರ್ಯ ಚಳುವಳಿಯಲ್ಲಿ ಜೈಲು ಕಂಡುದರಿಂದ ನಾಟಕ ಕಂಪನಿ ಮುಚ್ಚುವ - ಎಲ್ಲ ಸಂಗತಿಗಳೂ ಒಂದೆಡೆ ಸೇರುತ್ತವೆ. ಇದೇ ಹಾಡುಗಾರಿಕೆಯಿಂದಲೆ ನೌಕರಿ ದೊರೆತು ಹಳ್ಳಿಯಿಂದ ದಿಲ್ಲಿಯವರೆಗೆ ಏರುತ್ತ ಹೋದ ಸಾಧನೆ ಒಂದು ದೊಡ್ಡ ಕಥೆಯಾಗಿ ಇನ್ನೊಂದೆಡೆ ಕಾಣುತ್ತದೆ.

ಬಾಳಪ್ಪನವರು ಹಾಡುಗಾರಿಕೆಯನ್ನು ಹಲವಾರು ಉದ್ದೇಶಗಳಿಗಾಗಿ ಬಳಸಿಕೊಂಡಿದ್ದಾರೆ. ಜನರನ್ನು ರಂಜಿಸಲು, ಹಳ್ಳಿ ಜೀವನವನ್ನು ತಿದ್ದಲು, ಸುಧಾರಿತ ಬೇಸಾಯ, ಶಿಕ್ಷಣ, ಕುಟುಂಬ ಯೋಜನೆ ಮುಂತಾದವುಗಳನ್ನು ಪ್ರಸಾರ ಮಾಡಲು ಮತ್ತು ಸ್ವಾತಂತ್ರ್ಯ ಚಳುವಳಿಗಾಗಿ ಜನರನ್ನು ಬಡಿದೆಬ್ಬಿಸಲು - ಈ ಎಲ್ಲವಕ್ಕೂ ಬಾಳಪ್ಪನವರ ಹಾಡುಗಾರಿಕೆ ಉಪಯೋಗವಾಗಿದೆ. ಜೊತೆಗೆ ಅವರ ಒಟ್ಟು ಹಾಡುಗಾರಿಕೆ ಒಂದು ದೃಷ್ಟಿಯಿಂದ ಕನ್ನಡ ಪ್ರಸಾರಕ್ಕಾಗಿಯೂ

ಇತ್ತೆಂದು ಹೇಳಬಹುದಾಗಿದೆ. ಅವರು ಮರಾಠಿ, ಹಿಂದಿ, ಉರ್ದು ಭಾಷೆಗಳಲ್ಲಿಯ ಭಜನೆ, ಅಭಂಗ, ದೋಹಾ ಮತ್ತು ರಂಗಗೀತೆಗಳನ್ನು ಆಕರ್ಷಕವಾಗಿ ಹಾಡುತ್ತಿದ್ದರು. ಬಹುಭಾಷೆಗಳ ಹಾಡುಗಾರಿಕೆಯು ಅವರಿಗೆ ದೇಶದ ತುಂಬ ಸ್ವಾತಂತ್ರ್ಯದ ಚಳುವಳಿಗಾಗಿ ಜನರನ್ನು ಎಚ್ಚರಿಸುತ್ತ ತಿರುಗಾಡಲು ಅನುಕೂಲವಾಯಿತು. ದೇಶದ ತುಂಬ ಸಂಗೀತ ಕಚೇರಿಗಳನ್ನು ನಡೆಸಲು ಸಾಧ್ಯವಾಯಿತು. ವಿಶೇಷವಾಗಿ ಮಹಾರಾಷ್ಟ್ರದ ಗಡಿ ಭಾಗಗಳಾದ ಬೆಳಗಾಂ ಮತ್ತು ಧಾರವಾಡ ಜಿಲ್ಲೆಗಳ ಗಡಿ ಹಳ್ಳಿಗಳಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ಹೆಚ್ಚಿನ ಕಾರ್ಯಕ್ರಮಗಳನ್ನು ಕೊಡಲು ಸಾಧ್ಯವಾಯಿತು. ಇದರಿಂದ ಒಂದು ರೀತಿಯ ಭಾವೈಕ್ಯದ ಕೊಂಡಿಗಳಾಗಿಯೂ ಬಾಳಪ್ಪ ಕೆಲಸ ಮಾಡಿದರೆಂದು ಹೇಳಬೇಕಾಗುತ್ತದೆ.

ಮೂಲತಃ ತಾಯಿಯಿಂದ ಬಂದ ಜನಪದ ಹಾಡಿನ ಗತ್ತು ಮತ್ತು ಸ್ವತಃ ಈ ಶೈಲಿಯ ಹಾಡುಗಳನ್ನು ಹೆಚ್ಚು ಮೆಚ್ಚಿಕೊಂಡ ಕಾರಣ, ಶಿವಲಿಂಗಯ್ಯನವರಿಂದ ಪಡೆದ ಶಾಸ್ತ್ರೀಯ ಸಂಗೀತದ ತಿಳುವಳಿಕೆ, ಮರಾಠಿ ರಂಗಭೂಮಿಯ ಬಾಲಗಂಧರ್ವ ಮತ್ತು ಪಂಡಿತ ದೀನಾನಾಥರ ರಂಗಶೈಲಿಯ ಹಾಡುಗಾರಿಕೆ, ಸ್ವತಃ ತಾನೇ ಒಂದು ನಾಟಕ ಕಂಪನಿ ನಡೆಸಿದ ಅನುಭವ - ಈ ಎಲ್ಲವುಗಳ ಹಿನ್ನೆಲೆಯಲ್ಲಿ ಇವರ ಹಾಡಿನ ಧಾಟಿಗಳು ವಿಶಿಷ್ಟವೆನಿಸುತ್ತವೆ. ಒಂದು ಬಗೆಯ ಸಮ್ಮಿಶ್ರಣ ಶೈಲಿಯ ಹಾಡುಗಾರಿಕೆ ಇವರದಾಗಿತ್ತು. ಹೀಗಾಗಿ ಕೇಳುಗರಿಗೆ ಆಕರ್ಷಕವೆನಿಸುವ ಧಾಟಿಗಳು ಬಾಳಪ್ಪನವರದಾಗಿದ್ದವು.

ಪ್ರಾರಂಭದಲ್ಲಿ ಕರೆದಲ್ಲೆಲ್ಲ ಒಲ್ಲೆ ಎನ್ನದೆ ಹೋಗುವ ಪರಿಪಾಠವನ್ನು ಬಾಳಪ್ಪನವರು ಬೆಳೆಸಿಕೊಂಡು ಬಂದರು. ಹೀಗಾಗಿ ಹಳ್ಳಿ ಹಳ್ಳಿಗಳ ಆಮಂತ್ರಣಗಳು ಇವರ ಮನೆಬಾಗಿಲಿಗೆ ಬಂದು ಬೀಳುತ್ತಿದ್ದವು. ಹಬ್ಬ, ಹುಣ್ಣಿಮೆ, ಜಾತ್ರೆ, ಉತ್ಸವಗಳಲ್ಲಿ ಮಠಮಾನ್ಯಗಳ ಆಮಂತ್ರಣಗಳು ಸಾಮಾನ್ಯವಾಗಿರುತ್ತಿದ್ದವು. ಇವರ ಇನ್ನೊಂದು ದೊಡ್ಡ ಗುಣವೆಂದರೆ ಮುಂಗಡವಾಗಿಯೇ ಸಂಭಾವನೆ ಕೇಳದೇ ಇರುವ ಸ್ವಭಾವ. ಹಾಡುಗಾರಿಕೆ ಮುಗಿದ ನಂತರ ಕೈಮುಚ್ಚಿ ಕೊಟ್ಟಷ್ಟನ್ನು ಪಡೆದು ಬರುವ ಬಾಳಪ್ಪನವರು ಇನ್ನಷ್ಟು ಜನಪ್ರಿಯರಾಗಲು ಕಾರಣವಾಯಿತು.

ಜನಸಾಮಾನ್ಯರ ಎದುರಿಗೆ ಜನಪದದ ಅನೇಕ ಪ್ರಕಾರಗಳ

ಹಾಡುಗಳನ್ನು ಹಾಡುತ್ತಿದ್ದರು. ಕುಟ್ಟುವ, ಬೀಸುವ ಪದಗಳಿಂದ ಹಿಡಿದು ಲಾವಣಿ, ಕೋಲಾಟದ ಪದಗಳೂ ಸೇರಿರುತ್ತಿದ್ದವು. ಕನ್ನಡದ ಪ್ರಸಿದ್ಧ ಕವಿಗಳಾದ ಬೇಂದ್ರೆ, ಕುವೆಂಪು, ಸಿದ್ದಯ್ಯ ಪುರಾಣಿಕ ಮುಂತಾದವರ ಹಾಡುಗಳಲ್ಲದೆ ದಾಸರ ಪದಗಳು, ಶರಣರ ವಚನಗಳು ಬಾಳಪ್ಪನವರ ಹಾಡುಗಾರಿಕೆಯಲ್ಲಿ ಸೇರಿರುತ್ತಿದ್ದವು. ಆದರೆ ಅವರ ಪ್ರತಿ ಕಚೇರಿಯಲ್ಲಿ ಹಾಡುತ್ತಿದ್ದ ಪ್ರಥಮ ಗೀತೆಯೆಂದರೆ ಕುವೆಂಪು ಅವರ 'ಬಾರಿಸು ಕನ್ನಡ ಡಿಂಡಿಮವ' ಎಂಬ ಗೀತೆ. ನಂತರ ಅವರು ಮೇಲಿಂದ ಮೇಲೆ ಹಾಡುತ್ತಿದ್ದ ಗೀತೆಗಳೆಂದರೆ - 'ಇನ್ನೂ ಯಾಕ ಬರಲಿಲ್ಲವ್ವ ಹುಬ್ಬಳ್ಳಿಯಾಂವ', 'ನಾನು ಬಡವ ನೀನು ಬಡವಿ', 'ಮೊದಲು ಮಾನವನಾಗು', 'ನಾ ಸಂತಿಗೆ ಹೋಗಿದ್ನಿ ಆಕಿ ತಂದಿದ್ದಳೂ ಬೆಣ್ಣಿ', 'ಹಿಂದೂಸ್ಥಾನಕ ಎಂಥವಬೇಕ ಬಿಎಜಿ ಪಾಸಾಗಿರಬೇಕ', 'ಜ್ಯೋತಿ ಬೆಳಗುತಿದೆ' - ಇವು ಬಾಳಪ್ಪನವರ ಬಾಯಿಂದ ಮೇಲಿಂದ ಮೇಲೆ ಕೇಳಿಬರುವ ಹಾಡುಗಳಾಗಿದ್ದವು. ನಂತರ ಅವರು ಹಳ್ಳಿಗರಿಗೆ ತಿಳುವಳಿಕೆ ನೀಡುವ ಮುಖ್ಯ ಕೆಲಸವನ್ನೂ ನಿಭಾಯಿಸಬೇಕಾಗಿರುವುದರಿಂದ - ಕೃಷಿ, ಶಿಕ್ಷಣ ಹಾಗೂ ಕುಟುಂಬ ಯೋಜನೆ ಮುಂತಾದವುಗಳಿಗೆ ಸಂಬಂಧಿಸಿದ ಹಾಡುಗಳನ್ನು ಹೆಚ್ಚಾಗಿ ಹಾಡುತ್ತಿದ್ದರಂತೆ. ನಡುನಡುವೆ ವಿವರಣೆ ಕೊಡುತ್ತ, ಹಾಡುತ್ತ ಹೋಗುವ ಅವರ ಗಾಯನ ಶೈಲಿ ಬಹು ವಿಶಿಷ್ಟವಾಗಿರುತ್ತಿತ್ತಂತೆ.

ಸ್ವಾತಂತ್ರ್ಯ ಪೂರ್ವದಲ್ಲಿಯೇ ಇವರ ಹಾಡುಗಾರಿಕೆಯ ಮಹತ್ತರ ವರ್ಷಗಳು ಕಳೆದುದರಿಂದ ಸ್ವಾತಂತ್ರ್ಯ ಚಳುವಳಿಯ ಅರಿವನ್ನೂ ಮೂಡಿಸುವ ಮಹತ್ವದ ಕೆಲಸವನ್ನು ಬಾಳಪ್ಪನವರು ಮಾಡಿದರು. ಹೀಗಾಗಿ ಈಗಿನ ಕಾಲದ ಸಮೂಹ ಮಾಧ್ಯಮಗಳು ಮಾಡುವ ಕೆಲಸವನ್ನು ಬಾಳಪ್ಪನವರು ಬಹಳ ವರ್ಷಗಳ ಹಿಂದೆಯೇ ನಿಭಾಯಿಸಿದರೆಂಬ ಮಾತು ಮಹತ್ವದ್ದೆಂದು ತೋರುತ್ತದೆ.

ಬಾಳಪ್ಪನವರ ಹಾಡಿನ ಮೋಡಿಯೇ ಅಗಾಧವಾದುದು. ಹೀಗಾಗಿ ಅವರ ಹಾಡಿನ ಶ್ರೋತೃಗಳಲ್ಲಿ ಹಳ್ಳಿಯ ಅನರಕ್ಷರಸ್ತರಿಂದ ಹಿಡಿದು ರಾಜ್ಯದ ಮುಖ್ಯಮಂತ್ರಿಗಳು, ರಾಷ್ಟ್ರದ ಪ್ರಧಾನಮಂತ್ರಿಗಳೂ, ರಾಷ್ಟ್ರಪತಿಗಳೂ ಸೇರಿರುವುದು ಸಾಮಾನ್ಯ ಸಂಗತಿಯಲ್ಲ. ಕನ್ನಡ ನಾಡಿನ ಶ್ರೇಷ್ಠ ಕವಿಗಳಾದ ಕುವೆಂಪು, ಬೇಂದ್ರೆಯವರೇ ಅವರ

ಹಾಡುಗಾರಿಕೆಯನ್ನು ಕೇಳಿ ಮೆಚ್ಚಿದ್ದಾರೆ. ''ಹುಕ್ಕೇರಿ ಬಾಳಪ್ಪನವರ ಹಾಡಂದ್ರ ಜನಪದ ಸಂಗೀತದ ರಸಗಂಗೆಯಿದ್ದಂಗ. ನಾ ಬರದದ್ದಕ್ಕಿಂತಲೂ ಅವರ ಹಾಡು ಛಲೋ ಇರ್ತಾವ''[೧] ಎಂದು ಬೇಂದ್ರೆಯವರು ಅಭಿಪ್ರಾಯ ಪಡುತ್ತಾರೆ. 'ಬಾರಿಸು ಕನ್ನಡ ಡಿಂಡಿಮವ'ವನ್ನು ಬಾಳಪ್ಪನವರಿಂದ ಕೇಳಿದ ಕುವೆಂಪು ಅವರು ''ಕವಿಯ ಭಾವವನ್ನು ಜನರಿಗೆ ಮುಟ್ಟಿಸುವ ನಿಮ್ಮಂಥ ಗಾಯಕರ ಕೆಲಸ ಅತ್ಯಂತ ಮಹತ್ವದ್ದು. ನಿಮ್ಮ ಕಂಠ ಆ ಕೆಲಸ ನಿರಾಯಾಸವಾಗಿ ಮಾಡುತ್ತಿರುವುದು ಕಂಡು ಪರಮಾನಂದವಾಯ್ತು''[೨] ಎಂದು ಹೇಳಿದ್ದಾರೆ.

ಮೈಸೂರಿನಲ್ಲಿ ನಡೆದ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟನಾ ಸಮಾರಂಭಕ್ಕೆ ಲಕ್ಷ ಲಕ್ಷ ಜನ ಸೇರಿದ್ದರು. ಅರಮನೆ ಆವರಣ ತುಂಬಿ ಹೋಗಿತ್ತು. ಕುವೆಂಪು ಅವರು ಬಂದು ಸಮ್ಮೇಳನವನ್ನು ಉದ್ಘಾಟಿಸಿದರು. ಸಭೆ ಮುಕ್ತಾಯ ಘೋಷಿಸಿದ ನಂತರ ಜನ ಚೆಲ್ಲಾಪಿಲ್ಲಿಯಾಗಿ ಹೊರಟಿತು. ಆಗ ಬಾಳಪ್ಪನವರ ಹಾಡುವ ಸರದಿ. ಲಗುಬಗೆಯಿಂದ ವೇದಿಕೆ ಹತ್ತಿ ಕುಳಿತು, ಎದುರಿಗಿನ ಮೈಕ್‌ಗೆ ಬಾಯಿ ತೆರದವರೇ 'ಬಾರಿಸು ಕನ್ನಡ ಡಿಂಡಿಮವ' ಪ್ರಾರಂಭ ಮಾಡಿಯೇ ಬಿಟ್ಟರು. ಜನರ ಕಿವಿಗೆ ಇದ್ದಕ್ಕಿದ್ದಂತೆ ಅದ್ಭುತ ದನಿ ಬಿದ್ದಿತು. ಹರಿದು ಹೋಗುತ್ತಿರುವ ಜನ ತಡೆದು, ವೇದಿಕೆಯತ್ತ ತಲೆಯೆತ್ತಿ ಕಣ್ಣು ಹಾಯಿಸಿದರು. ಧುಮ್ಮಿಕ್ಕಿ ಬರುತ್ತಿರುವ ಕನ್ನಡ ಡಿಂಡಿಮದ ನಾದದ ಓಘಕ್ಕೆ ಜನ ಮನಸೋತರು. ಹಾಡುವವರು ಹುಕ್ಕೇರಿ ಬಾಳಪ್ಪನವರು ಎಂಬುದು ಕ್ಷಣಾರ್ಧದಲ್ಲಿ ಸಭೆಯ ಅರಿವಿಗೆ ಬಂದಿತು. ಜನ ಅವರನ್ನು ಕಾಣಲೆಂದು ಕುರ್ಚಿ ಹತ್ತಿ ನಿಲ್ಲತೊಡಗಿದರು. ಹಾಡು ನಿಂತಾಗ ಇಡೀ ಅರಮನೆಯ ಆವರಣ ಕರತಾಡನದಿಂದ ಪ್ರತಿಧ್ವನಿಸಿತು. ಬಾಳಪ್ಪನವರ ಕಂಠದ ಮೋಡಿಗೆ ಇದೊಂದು ದೊಡ್ಡ ನಿದರ್ಶನ. ಲಕ್ಷ ಲಕ್ಷ ಜನರನ್ನು ಹಿಡಿದು ನಿಲ್ಲಿಸುವ ತಾಕತ್ತುಳ್ಳ ಇಂತಹ ಇನ್ನೊಂದು ದನಿ ದೊರೆಯುವುದು ಅಪರೂಪ.

---

೧. ಸಿದ್ಧರಾಮಯ್ಯ ಮಠಪತಿ 'ಬಾಳಪ್ಪ ಹುಕ್ಕೇರಿ', ತರಂಗ (24.5.1992), ಪು. 70. ಉಲ್ಲೇಖ: ಶ್ರೀಮತಿ ನಂದಾ ಎಂ. ಪಾಟೀಲ, ಜಾನಪದ ಸಂಗೀತ ಕ್ಷೇತ್ರಕ್ಕೆ ಶ್ರೀ ಹುಕ್ಕೇರಿ ಬಾಳಪ್ಪನವರ ಕೊಡುಗೆ,. ಒಂದು ಅಧ್ಯಯನ, 1996. (ಅಪ್ರಕಟಿತ Ph.D. ಪ್ರಬಂಧ).

೨. ಅದೇ, ಪು. 70.

ಅವರ ಹಾಡಿನ ಮೋಡಿ, ಕಂಠದ ಪರಿಣಾಮಕ್ಕೆ ಇನ್ನೊಂದು ಅಪರೂಪದ ಉದಾಹರಣೆಯಿದೆ. ಅವರಿಗೆ ಕೇಂದ್ರ ಸಂಗೀತ ಮತ್ತು ನಾಟಕ ಅಕಾಡೆಮಿಯ ಪ್ರಶಸ್ತಿ ಬಂದಾಗ(1981) ದೆಹಲಿಯಲ್ಲಿ ಅದರ ಪ್ರಶಸ್ತಿ ಪ್ರದಾನ ಸಮಾರಂಭ. ಅಲ್ಲಿಯೇ ಅವರ ಸಂಗೀತ ಕಚೇರಿಯೂ ನಡೆಯಬೇಕು. ಬಾಳಪ್ಪನವರು ಹಾಡಬೇಕೆಂದು ಗುರುತಾದುದು ಕನ್ನಡದ ಹತ್ತು ಹಾಡುಗಳನ್ನು. ಸಭಿಕರೆಲ್ಲ ಸಂಪೂರ್ಣವಾಗಿ ಕನ್ನಡ ತಿಳಿಯದವರು. ಇಂತಹ ವಾತಾವರಣದಲ್ಲಿ ಬಾಳಪ್ಪನವರ ಸಂಗೀತ ಕಚೇರಿ 'ಬಾರಿಸು ಕನ್ನಡ ಡಿಂಡಿಮವ' ಹಾಡಿನಿಂದ ಪ್ರಾರಂಭ. ಹಾಡು ಮುಗಿಯುತ್ತಲೇ ಕರತಾಡನದ ಗುಂಜಾರವ. ಹೀಗೆ ಒಂದೊಂದು ಹಾಡು ಮುಗಿಯುತ್ತಲೇ ಜನರ ಮೆಚ್ಚುಗೆಯ ಪ್ರತಿಕ್ರಿಯೆ. ಕನ್ನಡದ ಹತ್ತು ಹಾಡುಗಳ ನಂತರವೂ ಮತ್ತೆ ಶ್ರೋತೃಗಳ ಅಭಿಲಾಷೆ. ಹೀಗಾಗಿ ಇನ್ನೆರಡು ಕನ್ನಡದ ಹಾಡುಗಳನ್ನೇ ಬಾಳಪ್ಪನವರು ಹಾಡಿದರಂತೆ. ಈ ಸನ್ನಿವೇಶವನ್ನು ಪ್ರತ್ಯಕ್ಷದರ್ಶಿಯೊಬ್ಬರು ಹೀಗೆ ವರ್ಣಿಸುತ್ತಾರೆ. ''ವರಕವಿ ಬೇಂದ್ರೆಯವರ 'ಯಾಕ ಬರಲಿಲ್ಲವ್ವ ತಂಗಿ ಹುಬ್ಬಳ್ಳಿಯಾಂವ' ಮತ್ತು 'ನಾನು ಬಡವಿ ಆತ ಬಡವ' ಎಂಬ ಕೊನೆಯ ಎರಡು ಹಾಡುಗಳನ್ನು ತನ್ಮಯರಾಗಿ ಮನತುಂಬಿ ಹಾಡಿ, ಕನ್ನಡ ತಿಳಿಯದ ಸಭಿಕರನ್ನು ತಣಿಸಿದ್ದರು. ಅವರ ಹಾಡುಗಾರಿಕೆಯ ಮೋಡಿ ಭಾಷಾ ಗಡಿ ದಾಟಿ ಕೇಳುಗರನ್ನು ಸಮ್ಮೋಹನಗೊಳಿಸಿತ್ತು.''[೩]

ಬಾಳಪ್ಪನವರು ಕೇವಲ ಪ್ರಭಾವಶಾಲಿ ಹಾಡುಗಾರರಷ್ಟೇ ಅಲ್ಲ, ಅವರು ಅಷ್ಟೇ ಒಳ್ಳೆಯ ಮಾತುಗಾರರೂ ಕೂಡ ಆಗಿದ್ದರು. ಅದಕ್ಕಾಗಿಯೇ ಹಾಡಿನಷ್ಟೇ ಅವರ ವಿವರಣೆಗಳೂ ಆಕರ್ಷಕವಾಗಿರುತ್ತಿದ್ದವು. ಈ ಮಾತಿನ ಬಲದಿಂದಲೇ ಅವರು ಅನೇಕರ ಜೊತೆ ಉತ್ತಮ ಸಂಬಂಧವನ್ನಿಟ್ಟುಕೊಂಡಿದ್ದರು. ನಂಜಿಲ್ಲದ ಅವರ ಹೃದಯದಿಂದ ಬರುವ ಮಾತುಗಳು ಎಂಥವರನ್ನೂ ಕರಗಿಸಬಲ್ಲ ಶಕ್ತಿ ಹೊಂದಿದ್ದವು. ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಿಸುವ ಮಾತುಗಾರಿಕೆ ಅವರದು. 'ಒಳ್ಳೆಯ ಮಾತುಗಳನ್ನಾಡಿದರೆ ಏನು ನಾಲಿಗಿ ಸೀಳಿ ಬೀಳುತ್ತದೆಯೇ? ಎಂಬ ಭಾವನೆಯ ಬಾಳಪ್ಪ, ಕುಳ್ಳಿರೆಂದರೆ ನೆಲ ಕುಳಿ ಹೋಹುದೇ? ಒಡನೆ ನುಡಿದರೆ ಶಿರ ಹೊಟ್ಟೆಗಳು

೩. ಡಾ|| ಎಚ್. ಚಂದ್ರಶೇಖರ, ಹಣತೆಗಳು, ಪು. 45-46

ಒಡೆಯುವುವೇ? ಸಹಾಯ ಮಾಡಲು ಆಗದಿದ್ದರೇನಾಯಿತು? ಒಂದು ಒಳ್ಳೆ ಮಾತನಾಡಲಾದರೂ ಆಗಬಹುದಲ್ಲ'- ಎಂಬ ತತ್ವದವರು ಶ್ರೀ ಬಾಳಪ್ಪನವರು.

ಮಾತಿನ ಬಗ್ಗೆ ಬಾಳಪ್ಪನವರ ಅಭಿಪ್ರಾಯ ಹೀಗಿದೆ : ''ನಮ್ಮ ಜನರಿಗೆ ಮಾತಾಡಾಕ ಬರೋದಿಲ್ರಿ. ನಾಲ್ಕು ಒಳ್ಳೆ ಮಾತಾಡಿದರ ಗಂಟ ಕಳಕೊಂಡ್ಹಂಗ ಮಾಡ್ತಾರ. ಒಳ್ಳೇದು ಮಾತಾಡೋದು ಅಂದ್ರ ಹೊಗಳೋದು ಅಂತ ಅಲ್ರಿ. ಯಾರೋ ಒಬ್ಬರು ಒಳ್ಳೇ ಕೆಲಸ ಮಾಡಿದರ ಅಗದಿ ಚಲೋ ಮಾಡಿದೆಪಾ ಅಂದರ ಅಂವ ಮುಂದಕ ಅದಕ್ಕಿಂತ ಒಳ್ಳೆದ ಮಾಡ್ತಾನ. ನನಗ ಆಗಲಿ, ಹಾಡೋ ಹೊತ್ನಾಗ ಭೇಷ್ ಒನ್ಸ್‌ಮೋರ್ ಅಂದರ ಮತ್ತೊಂದು ಹಾಡ್ತೇನಿ ನೋಡ್ರಿ. ಮನುಷ್ಯನ ಸ್ವಭಾವನ ಹಾಂಗ್ರಿ. ಯಾಕ್ರಿ? ನಿಮ್ಮ ಮನ್ಯಾಗಿನ ದನಕರು ನಾಯಿ ಅವಕ್ಕೆ ನಕ್ಕೊಂತ ಬೆನ್ನ ಸವರಿದರ ಅವು ಹ್ಯಾಂಗ್ ಪ್ರೀತಿ ಮಾಡ್ತಾವು ನೋಡ್ರಿ, ಮನಸ್ಯಾರು ಹಂಗರಿ.''[೪]

'ದೇವರು ಬಾಯಿ ಕೊಟ್ಟಿರೋದು ಮಾತಾಡಕ, ಕಂಠ ಕೊಟ್ಟಿರೋದು ಹಾಡಾಕ' ಎಂದೇ ನಂಬಿರುವ ಬಾಳಪ್ಪ ಹುಕ್ಕೇರಿ ಅವರು 'ಹಾಡ ಹಾಡೋಣ ಮತ್ಸರ ಮರೆಯೋಣ' ಎಂಬ ತತ್ವದವರು. ಹಾಡಿನ ಸರದಾರನಾಗಿರುವಂತೆ ಬಾಳಪ್ಪನವರು ಮಾತಿನಕಾಕಾ ಕೂಡ ಆಗಿದ್ದರು. ಸಣ್ಣವರೊಂದಿಗೆ, ದೊಡ್ಡವರೊಂದಿಗೆ, ಮಕ್ಕಳೊಂದಿಗೆ, ಮುದುಕರೊಂದಿಗೆ, ಹೆಂಗಸರೊಂದಿಗೆ ಯಾವಾಗ ಯಾವಾಗ, ಹೇಗೆ ಹೇಗೆ ಮಾತನಾಡುವುದೆಂದು ಬಾಳಪ್ಪನವರಿಗೆ ಗೊತ್ತು. ಅವರವರ ಸ್ವಭಾವ ಅಭಿರುಚಿ ಅರಿತು ಮಾತನಾಡುವ ವ್ಯವಹಾರಜ್ಞಾನ ಬಾಳಪ್ಪನವರಿಗೆ ಕರಗತವಾಗಿತ್ತು. ಈ ವ್ಯವಹಾರದಲ್ಲಿ ಅವರ ವಿಶ್ವಾಸವೂ ಅಷ್ಟೇ ಮುಖ್ಯವಾಗಿರುತ್ತಿತ್ತು. ಹೀಗಾಗಿ ವಾರಾನುಗಟ್ಟಲೆ ಪ್ರವಾಸ ಮಾಡುವಾಗಲೂ ಬಾಳಪ್ಪ ಬರಿ ಹೊಟ್ಟಿಲೆ ಉಳಿಯುವ ಪ್ರಸಂಗವೇ ಬರುತ್ತಿರಲಿಲ್ಲ. ತಾವು ಹಾಡುಗಾರಿಕೆಗೆ ಹೋದಲ್ಲೆಲ್ಲ ಪರಿಚಿತರ ಅಡುಗೆ ಮನೆವರೆಗೂ ಸರಾಗವಾಗಿ ಅಡ್ಡಾಡುವ ವಿಶ್ವಾಸ ಪಡೆದಿದ್ದರು. ಹೆಣ್ಣುಮಕ್ಕಳನ್ನು ಪ್ರೀತಿಯಿಂದ ಮಾತನಾಡಿಸಿ, ಬೇಕಾದುದನ್ನು

೪. ಸಾವಿರ ಹಾಡಿನ ಸರದಾರ, ಪು 32

ಮಾಡಿಸಿಕೊಂಡು ಸಾಕಾಗುವಷ್ಟು ನೀಡಿಸಿಕೊಂಡು ಉಣಬಲ್ಲ ಆತ್ಮೀಯತೆಯನ್ನು ಬೆಳೆಸಿಕೊಂಡಿದ್ದರು. ಇದು ಬಾಳಪ್ಪನವರು ತಮ್ಮ ಮಾತಿನ ಮೂಲಕವಾಗಿ ಗಳಿಸಿಕೊಂಡ ಬಹುದೊಡ್ಡ ವಿಶ್ವಾಸ ಮತ್ತು ಮರ್ಯಾದೆ.

ಕರ್ನಾಟಕದ ತುಂಬ ಅಡ್ಡಾಡಿದ ಬಾಳಪ್ಪನವರಿಗೆ ಊರಿಗೊಂದು ಮನೆ ಮಠ ಗಳಿಸಿದ ಕೀರ್ತಿ ಇದೆ. ಮಠದ ಸ್ವಾಮಿಗಳ ಒಬ್ಬೊಬ್ಬರ ಸ್ವಭಾವವನ್ನು ಅರಿತ ಬಾಳಪ್ಪ ಅವರವರ ಖಯಾಲಿಗೆ ತಕ್ಕಂತೆ ಮಾತನಾಡುತ್ತ ಹಾಲು ಹಣ್ಣು ಪಡೆದವ. ಹಾಲು ಹಣ್ಣು ಕೊಟ್ಟಲ್ಲಿ ಮೇಲೆ ಉಂಡಿ ಪಡೆದವ. ಪರಿಚಯದ ಮನೆಯಲ್ಲಾದರೆ ಹೆಣ್ಣುಮಕ್ಕಳೊಂದಿಗೆ ಮಾತನಾಡಿ ಹೋಳಿಗೆ ತುಪ್ಪವನ್ನೂ ಸವಿದವ.

ಬಾಳಪ್ಪನವರೇ ಹೇಳುವ ಅವರ ಮಾತಿನ ಪರಿಣಾಮದ ಒಂದೆರಡು ಉದಾಹರಣೆಗಳನ್ನು ಇಲ್ಲಿ ನೋಡಬಹುದಾಗಿದೆ.

೧. ''ಬಾಳಪ್ಪನವರು ಬಿಜಾಪುರ ಜಿಲ್ಲೆ ಪ್ರವಾಸದಲ್ಲಿದ್ದಾಗ ಒಬ್ಬ ಹೆಣ್ಣುಮಗಳು ಅದೇ ಆಗ ಹರಿದ ತಾಜಾ ಬದನೇಕಾಯಿಗಳನ್ನು ಬುಟ್ಟಿಗೆ ತುಂಬಿಕೊಂಡು ಹೊರಟಿದ್ದಳು. 'ಬದನಿಕಾಯಿ ಹೆಂಗವಾ ತಾಯಿ' ಎಂದು ಕೇಳಿದರು. 'ಮೂರು ರೂಪಾಯಿಗೆ ಒಂದು ಕೇಜಿರಿ'. 'ಕೊಡಬೇಕವ್ವ ಏನ ತುಟ್ಟಿ ಅಲ್ಲ ಬಿಡು. ಬದನಿಕಾಯಿ ಅಗದಿ ಮಲ ಮಲ ಅಂತಾವು. ನಮ್ಮೂರ ಕಡೆ ಇಂಥಾ ಬದನಿಕಾಯಿ ನೋಡಾಕೂ ಸಿಗಾಂಗಿಲ್ಲ' ಎಂದು ವರ್ಣನೆ ಮಾಡಿದರು. ಬಾಳಣ್ಣನ ಮಾತಿಗೆ ಆಕೆಯ ಅರ್ಧ ಸಿಡುಕು ಇಳಿಯಿತು. 'ಇದೇ ಇನ್ನ ಹರಕೊಂಡು ಬಂದೇನಣ್ಣ' ಎಂದಳು. 'ಹಾಂಗ, ನಿನ್ನ ಹೆಸರೇನವಾ ಅಕ್ಕಾ'. 'ಕಲ್ಲವ್ವರಿ', 'ಕಲ್ಮೇಶ್ವರ ದೇವರ ಹೆಸರ ಇಟ್ಟಾರ' 'ನಿನ್ನ ಜೀವನ ಸಾರ್ಥಕ ಆತು. ಬಾಳ ದೊಡ್ಡ ಹೆಸರು'. ಅಷ್ಟು ಹೇಳೋದೆ ತಡ 'ಯಣ್ಣಾ ನೀವು ದೂರದಿಂದ ಬಂದಂಗ ಕಾಣ್ತೈತಿ. ನಮ್ಮ ಹೊಲದಾಗ ರಗಡ ಬದನಿಕಾಯಿ ಬೆಳಿತೀವಿ. ನೀವು ರೊಕ್ಕಾ ಏನ ಕೊಡಬ್ಯಾಡ್ರಿ, ಹಂಗ ತೊಗೊಂಡ ಹೋಗ್ರಿ' ಎಂದು ಬುಟ್ಟಿಯನ್ನೇ ಬಾಳಪ್ಪನವರ ಮುಂದೆ ಇಟ್ಟಳು. 'ಮಾತಿನ ಮಜಾ ಅಂದರ ಹೀಂಗ ಇರತೈತಿ. ಗಿಡದ ಮ್ಯಾಲಿನ ಮಂಗ್ಯಾ ಸಹಿತ ಕೈಬಿಡಬೇಕು ಮಾತಾಡಿದರ' ಎಂದು ಚಟಾಕಿ ಹಾರಿಸುತ್ತ ಬಾಳಪ್ಪನವರು ಹೇಳಿದರು.''[೫]

---

[೫] ಸಾವಿರ ಹಾಡಿನ ಸರದಾರ, ಪು. 33

೨. ''ಇನ್ನೊಂದು ಮಜಾ ಹೇಳ್ತಿನಿ ನಿಮಗ. ಒಬ್ಬೊಬ್ಬ ಸ್ವಾಮಿಗಳಿಗೆ ಒಂದೊಂದರ ಮ್ಯಾಲ ಪ್ರೀತಿ. ಒಬ್ಬರಿಗೆ ಶಿವಾನುಭವ ಪುರಾಣ ಪುಣ್ಯಕಥೆ ಅಂದ್ರ ಪ್ರೀತಿ. ಇನ್ನೊಬ್ಬರಿಗೆ ಕುಸ್ತಿ ಇಷ್ಟ. ಒಂದು ಸಾರೆ ಗೋಕಾಕ ತಾಲೂಕಾದ ಮರಡಿ ಮಠಕ ಹ್ವಾದಾಗ ಅಲ್ಲಿ ಸ್ವಾಮಿಗಳು 'ಏನು ಬಾಳಪ್ಪ, ಎಲ್ಲಿಂದ ಬಂದ್ರಿ' ಎಂದು ವಿಚಾರಿಸಿದರು. 'ಅಥಣಿಗೆ ಹೋಗಿದ್ದೆ ಅಪ್ಪಾವರ. ಬರುವಾಗ ಕುಡಚಿಯೊಳಗ ಕುಸ್ತಿ ಇದ್ದವ್ರಿ. ನೋಡ್ಕೊಂಡ ಬಂದೆ.'

'ಯಾರ ಕುಸ್ತಿ ಇತ್ತು?'

'ತಡಾಕಿ ಮಲ್ಲಪ್ಪನ ಕುಸ್ತಿ ಇತ್ತು.'

'ಕುಸ್ತಿ ಹ್ಯಾಂಗ್ ಆದವು?'

'ಇನ್ನೇನ ಕೈ ಕೈ ಕೂಡುಸುದಾರಾಗ ಮಲ್ಲಪ್ಪ ದೋಪಡಿ ಡಾವ ಹಾಕಿ'...ಇನ್ನೂ ಮಾತು ಮುಗಿದಿರಲಿಲ್ಲ. 'ಮುಂದೇನಾತಪ?' ಎಂದು ತಮಗೆ ಅರಿವಿಲ್ಲದೆ ಕುಳಿತವರು ಎದ್ದು ನಿಂತರು. 'ಮಲ್ಲಪ್ಪ ತಡಾಕಿಲ್ಲದ ಕುಸ್ತಿ ಮಾಡಿಬಿಟ್ಟ ಅಪ್ಪಾರ'.

'ಅಂವಾ ಬಿಟ್ಟಾನೇನ್ನೋ ತಮ್ಮಾ, ಅವನ ಕುಸ್ತೀನ ಹಂಗ.'

'ಕೂಡಿದ ಮಂದಿ ಕೇಕಿ ಹೊಡದು ಅಂವನ್ನ ಎತ್ತಿಬಿಟ್ರು.'

'ಆಲಲಲಾ'

'ಹೌದ್ರಿ ಅಪ್ಪಾರ'

'ಯಾರದೀರಿ ಅಲ್ಲೆ? ಬಾಳಪ್ಪನ ಹಾಲು ಹಣ್ಣು ತೊಗೊಂಡು ಬರ್ರಿ, ಬಾಳ ಸಂತೋಷದ ಸುದ್ದಿ ತಂದಾನ'.

'ಮತ್ತ ಮುಂದ ಕುಸ್ತಿ ಆದವೇನು?'

'ಅರ್ಧಾ ತಾಸಿನ ಮ್ಯಾಲ ಬೆಳಗಾವಿ ಜಾನಿ ಎಲ್ಲಪ್ಪನದು ಕುಸ್ತಿ ನಡೀತು'

'ಅದೇನಾತು'

'ಜಾನಿ ಎಲ್ಲಪ್ಪ ಜಂಗಡಾವು ಹಾಕಿ ಎದುರಾಳಿನ ರಪ್ ಅಂತ ಕೆಡವೇ ಬಿಟ್ಟನ್ರಿ' ಇದನ್ನು ಕೇಳಿದ ಸ್ವಾಮಿಗಳಿಗೆ ಆನಂದ ಉಕ್ಕಿ ಹರಿಯಿತು. 'ಬಾಳಪ್ಪಗ ಉಂಡೀನೂ ತೊಗೊಂಡು ಬರ್ರೊ' ಎಂದು ಕೂಗಿಬಿಟ್ಟರು''.[೬]

೬. ಸಾವಿರ ಹಾಡಿನ ಸರದಾರ, ಪು. 30-31.

ಇಂತಹ ಅನೇಕ ಅನುಭವಗಳನ್ನು ತಮ್ಮ ಸ್ಮೃತಿಯಲ್ಲಿ ತುಂಬಿಕೊಂಡ ಬಾಳಪ್ಪನವರು 'ಕರ್ನಾಟಕದಾಗ ಊರಿಗೊಂದು ಮನಿ ಆದಾವ ನನಗ' ಎಂದು ನಗುತ್ತ ಹೇಳುತ್ತಿದ್ದರಂತೆ. ಬಾಳಪ್ಪನವರನ್ನು ಬಲ್ಲ ಎಲ್ಲರೂ ಹೇಳುವ ಮಾತೆಂದರೆ ಅವರ ನಡೆ ಶುದ್ಧ, ನುಡಿ ಶುದ್ಧ. ಮನಸ್ಸು ಅಂತಃಕರಣಗಳು ಪೂರ್ಣಶುದ್ಧ. ಕೈ ಬಾಯಿ ಕಚ್ಚೆಗಳು ತೀರ ಶುದ್ಧವಿದ್ದ ಮನುಷ್ಯ. ಅಂತಲೇ ಆತ ಮುರಗೋಡದ ಕಾಕಾ. ಬಲ್ಲವರ ಬಾಳಪ್ಪಣ್ಣ, ಬಾಳಪ್ಪ ಹಾಡನ್ನು ಪ್ರೀತಿಸಿದಷ್ಟೇ ಊಟವನ್ನು ಪ್ರೀತಿಸುತ್ತಿದ್ದ. ಅದಕ್ಕೆಂದೇ ಅವರು ಹೇಳುತ್ತಿದ್ದರು. 'ಹಡೆದ ಹೊಟ್ಟಿ, ಹಾಡೂ ಹೊಟ್ಟಿ ಎರಡೂ ಸಮ' ಎಂದು. ಕರ್ನಾಟಕದ ತುಂಬ ಊರಿಗೊಂದು ಮನೆ ಪಡೆದ ಬಾಳಪ್ಪ ವಿಶ್ವಾಸಕ್ಕೆ ಪ್ರತೀಕವಾದ ವ್ಯಕ್ತಿ. ನಾವು ಏನೆಲ್ಲ ಸಾದಿಸಬಹುದು, ಇದು ಸಾಧಿಸುವುದು ಸಾಮಾನ್ಯ ಸಂಗತಿ ಅಲ್ಲ.

## ೪

## ಹಾಡು ಹರವಿದ ಎತ್ತರ ಬಿತ್ತರಗಳು

ಜನಪ್ರಿಯ ಸದಭಿರುಚಿಯ ಹಾಡುಗಳನ್ನು ಆಯ್ಕೆ ಮಾಡಿಕೊಳ್ಳುವ ಬಾಳಪ್ಪನವರಿಗೆ ಶಾಸ್ತ್ರೀಯ ಸಂಗೀತದ ಜೊತೆಗೆ ರಂಗಗೀತೆಗಳ ಅನುಭವವೂ ಇರುವುದು ಗಮನಾರ್ಹ. ಅದಕ್ಕಾಗಿ ಅವರ ಧಾಟಿಗಳಲ್ಲಿ ಈ ರಂಗಗೀತೆಯ ಧಾಟಿಗಳ ಛಾಯೆ ದಟ್ಟವಾಗಿರುವುದು ಗಮನಕ್ಕೆ ಬರುತ್ತದೆ. ಜನಪದ ವಿವಿಧ ಹಾಡುಗಳ ಧಾಟಿಗಳು-ಸೋಬಾನ, ಕುಟ್ಟುವ, ಬೀಸುವ, ಲಾವಣಿ-ಮುಂತಾದವುಗಳ ಧಾಟಿಗಳು, ಮರಾಠಿ ಅಭಂಗಗಳು, ಹಿಂದಿ ಭಜನೆಗಳು ಇವುಗಳ ವಿಶೇಷತೆ ಇರುತ್ತಿತ್ತು. ಅವರ ದನಿಯ ಆಲಾಪ, ಪಲಕುಗಳು ಅವರ ಗಾಯನಕ್ಕೆ ಒಂದು ವಿಶೇಷ ಮೆರಗನ್ನು ತರುತ್ತಿದ್ದವು.

ಈ ಎಲ್ಲ ಸಂಪತ್ತುಗಳಿಂದ ಅವರು ಇಡೀ ದೇಶದ ತುಂಬ ತಮ್ಮ ಹಾಡುಗಾರಿಕೆಯಿಂದ ಪ್ರಸಿದ್ಧಿ ಪಡೆಯಲು ಸಾಧ್ಯವಾಗಿದೆ. ಹೀಗೆ ಒಬ್ಬ ಸುಗಮ ಸಂಗೀತಗಾರ ಇಡೀ ದೇಶದ ಮರ್ಯಾದೆಯನ್ನು ಪಡೆದದ್ದು, ಮುರಗೋಡಿನ ಮಹಾಂತರಿಂದ ದಿಲ್ಲಿಯ ರಾಷ್ಟ್ರಪತಿ, ಪ್ರಧಾನಮಂತ್ರಿಗಳವರೆಗೆ-ಶ್ರೋತೃಗಳ ಸಂಬಂಧ ಪಡೆದ್ದದು-ಅವರ ಸಾಧನೆಯ ಮಹತ್ತನ್ನು ಹೇಳುತ್ತದೆ. ಹೀಗಾಗಿ ಬಾಳಪ್ಪ ಕರ್ನಾಟಕಕ್ಕೇ ವಿಶಿಷ್ಟವಾದ ಸುಗಮ ಸಂಗೀತಗಾರನಷ್ಟೇ ಅಲ್ಲ, ಭಾರತ ಕಂಡ ಅಪರೂಪದ ಗಾಯಕ ಆಗಿದ್ದಾರೆ.

ಹುಕ್ಕೇರಿ ಬಾಳಪ್ಪನವರ ನೆನಪು ಬಂದಾಗಲೆಲ್ಲ ಬಿಳಿಯ ಧೋತರ, ಬಿಳಿಯ ಅಂಗಿ, ತಲೆಯ ಮೇಲೆ ಟೊಪ್ಪಿಗೆ, ಅಜಾನುಬಾಹು ದೇಹ ನೆನಪಿಗೆ ಬರುವ ಆಕೃತಿ. ಸ್ವಲ್ಪ ವಿಶೇಷ ಕಾರ್ಯಕ್ರಮವಿದ್ದರೆ ಮೇಲೊಂದು ಕರಿಯ ಕೋಟು, ತಲೆಗೆ ಜರತಾರಿ ರುಮಾಲು. ೧೯೫೫ರಲ್ಲಿ ದೆಹಲಿಯಲ್ಲಿ ನಡೆದ ಯುವಜನಮೇಳಕ್ಕೆ ಹೋದ ಬಾಳಪ್ಪನವರಿಗೆ ಜವಾಹರಲಾಲ ನೆಹರು ಅವರ ಮನೆಯಲ್ಲಿ ಹಾಡುವ ಅವಕಾಶ

ದೊರೆಯಿತು. ಬಾಳಪ್ಪವರ ಗಾಯನಕ್ಕೆ ಮನಸೋತ ನೆಹರೂಜಿ ಸಂತೋಷದಲ್ಲಿ ಶಹಬ್ಬಾಶ್ ಎಂದು ಬೆನ್ನು ಚಪ್ಪರಿಸಿದರಂತೆ. ''ಆ ಕೋಟು ಇನ್ನೂ ಒಗದಿಲ್ರಿ ನಾ'' ಎಂದು ಚಟಾಕಿ ಹಾರಿಸಿ ನೆಹರೂಜಿ ಅವರನ್ನು ನೆನೆಸಿಕೊಳ್ಳುವ ಮಾತನ್ನು ಬಾಳಪ್ಪನವರ ಬಾಯಿಂದಲೇ ಕೇಳಬೇಕು.

ಪ್ರಸಿದ್ಧ ಹಾಡುಗಾರನಾದ ಬಾಳಪ್ಪ ದಿಲ್ಲಿಯ ಪ್ರಧಾನಿ, ರಾಷ್ಟ್ರಪತಿಗಳ ಮುಂದೆ ಹಾಡುವುದಕ್ಕಿಂತ ಮುಂಚೆ-ಮೈಸೂರಿನ ಅರಸರ ದರಬಾರಿನಲ್ಲೂ ಹಾಡಿದವ. ಬಾಳಪ್ಪನವರ ಶ್ರೋತೃಗಳ ಬಳಗ ಬಹಳ ದೊಡ್ಡದು. ನೆಹರೂಜಿ, ಇಂದಿರಾಗಾಂಧಿ, ಝಾಕೀರ ಹುಸೇನ, ರಾಜೇಂದ್ರ ಪ್ರಸಾದ, ನಿಜಲಿಂಗಪ್ಪ ಮುಂತಾದ ಪ್ರತಿಷ್ಠಿತ ರಾಷ್ಟ್ರನಾಯಕರ ಎದುರಿಗೆ; ಕುವೆಂಪು, ಬೇಂದ್ರೆ, ಡಿ. ಎಲ್. ನರಸಿಂಹಾಚಾರ್ ಮುಂತಾದ ಶ್ರೇಷ್ಠ ಸಾಹಿತಿಗಳ ಸಮ್ಮುಖದಲ್ಲಿ - ಹಾಡಿದ ಹೆಮ್ಮೆ ಬಾಳಪ್ಪನವರದು. ಆಕಾಶವಾಣಿ, ದೂರದರ್ಶನಗಳಿಗಲ್ಲದೆ, ಎಚ್.ಎಂ.ವಿ.ಗಾಗಿಯೂ ಹಾಡಿದ ಕೀರ್ತಿ ಅವರದಾಗಿದೆ.

## ಹಾಡುಗಾರಿಕೆ ಸ್ವಾತಂತ್ರ್ಯ ಚಳುವಳಿಗಾಗಿ :

ಬಾಳಪ್ಪ ಕೇವಲ ಒಬ್ಬ ಹಾಡುಗಾರನಾಗಿ ಜೀವನ ಕಳೆದಿದ್ದರೆ ಅದಕ್ಕೆ ಇಷ್ಟೊಂದು ಮಹತ್ವ ಬರುತ್ತಿರಲಿಲ್ಲ. ತನ್ನ ಹಾಡುಗಾರಿಕೆಯ ಪ್ರತಿಭೆಯನ್ನು ಸ್ವಾತಂತ್ರ್ಯ ಚಳುವಳಿಯ ಕಾಲಕ್ಕೆ ಜನರನ್ನು ಎಚ್ಚರಿಸುವ ಕೆಲಸದಲ್ಲಿ ತೊಡಗಿಸಿದ್ದು ಒಂದು ಇತಿಹಾಸ. ಕನ್ನಡ, ಮರಾಠಿ, ಉರ್ದು, ಹಿಂದಿ-ಬಾಷೆಗಳನ್ನು ಬಲ್ಲ ಬಾಳಪ್ಪ ಆ ಎಲ್ಲ ಭಾಷೆಗಳಲ್ಲಿ ಸ್ವಾತಂತ್ರ್ಯದ ಅರಿವನ್ನು ಹೆಚ್ಚಿಸುವ ಹಾಡುಗಳನ್ನು ಹಾಡಿದ, ಭಾಷಣ ಮಾಡಿದ, ಪ್ರಭಾತಫೇರಿ ನಡೆಸಿ, ಜನರನ್ನು ಎಚ್ಚರಿಸುವ ಕೆಲಸ ಮಾಡಿದ. ಅಸಹಕಾರ ಮತ್ತು ಕಾಯ್ದೆ ಭಂಗ ಚಳುವಳಿಯ ಕಾಲಕ್ಕೆ ಈ ಎಲ್ಲ ಕೆಲಸಗಳನ್ನು ಅತ್ಯಂತ ಚುರುಕಿನಿಂದ ಮಾಡಿದ ಬಾಳಪ್ಪ ಇಂಗ್ಲೀಷರ ದುಷ್ಟ ಕಣ್ಣಿಗೆ ಬಿದ್ದ. ಪರಿಣಾಮವಾಗಿ ೧೯೪೨ರಲ್ಲಿ ಆರು ತಿಂಗಳ ಕಾಲ ಕಾರಾಗೃಹ ವಾಸವನ್ನು ಅನುಭವಿಸಿದ.

೧೯೬೨ರ ಪಾಕಿಸ್ತಾನ ಮತ್ತು ಚೀನ ದೇಶಗಳು ಭಾರತದೊಂದಿಗೆ

ನಡೆಸಿದ ಯುದ್ಧಗಳ ಸಮಯದಲ್ಲಿ ಜನರಲ್ಲಿ ತಮ್ಮ ಹಾಡುಗಳಿಂದ ಉತ್ಸಾಹ ತುಂಬಿದರಲ್ಲದೆ ತಮಗೆ ಬಂದ ಬೆಳ್ಳಿ-ಬಂಗಾರದ ಪದಕಗಳನ್ನು ಸೈನಿಕರ ನಿಧಿಗೆ ದಾನಮಾಡಿದ ಅಪರೂಪದ ಉದಾಹರಣೆಗಳೂ ಇವೆ.

**ನಾಟಕ ಕಂಪನಿ :**

ಬಾಳಪ್ಪ ೧೯೩೭ರಲ್ಲಿ ಗೆಳೆಯರೊಂದಿಗೆ ಕೂಡಿ 'ಮಹಾತ್ಮಾ ಸೇವಾ ಸಂಗೀತ ನಾಟಕ ಮಂಡಳಿ' ಎಂಬ ಒಂದು ನಾಟಕ ಕಂಪನಿಯನ್ನೇ ತೆರೆದು ಎಂಟು ವರ್ಷಗಳ ಕಾಲ (೧೯೪೦ರವರೆಗೆ) ನಡೆಸಿದರು. ಆ ನಾಟಕಗಳ ಜೀವಾಳವೆಂದರೆ ಬಾಳಪ್ಪನವರ ಹಾಡುಗಾರಿಕೆ. ಹೀಗಾಗಿ ಅವೆಲ್ಲ ಗಾಯನ ಪ್ರಧಾನ ನಾಟಕಗಳು ಅರ್ಥಾತ್ ಬಾಳಪ್ಪನವರ ನಾಟಕಗಳು. ಇಲ್ಲೂ ಬಾಳಪ್ಪನವರು ಮಾಡಿದ್ದು, ಜನರಿಗೆ ಸ್ವಾತಂತ್ರ್ಯ ಚಳುವಳಿಯ ಸಂದೇಶವನ್ನು ಬೀರುವುದೇ.

೧೯೪೦ರಲ್ಲಿ ನಾಟಕ ಕಂಪನಿ ಮುಚ್ಚಿತು. ಕಾರಣ ೧೯೪೨ರಲ್ಲಿ ಬಾಳಪ್ಪನವರಿಗೆ ಬ್ರಿಟೀಷರು ಆರು ತಿಂಗಳು ಜೈಲಿಗೆ ಕಳಿಸಿದ್ದರು.

ಬಾಳಪ್ಪ ಛಲಗಾರ. ಮತ್ತೆ ೧೯೪೭ರಿಂದ ೪೫ರವರೆಗೆ ಇಡೀ ಭಾರತದೇಶದ ತುಂಬೆಲ್ಲ ಸಂಚರಿಸಿದ. (ವಿಶೇಷವಾಗಿ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಗಳಲ್ಲಿ) ಲಾವಣಿ, ದೇಶಭಕ್ತಿಗೀತೆ, ಭಾವಗೀತೆಗಳನ್ನು ಹಾಡುತ್ತ-ಜನರಿಗೆ ಸ್ವಾತಂತ್ರ್ಯದ ಅರಿವು ಹೆಚ್ಚಿಸುವಲ್ಲಿ ಸಹಾಯ ಮಾಡಿದ. ಭಾರತದ ಜನಮನಗೆದ್ದ.

ಒಬ್ಬ ಸಾಮಾನ್ಯ ಹಾಡುಗಾರ ಇಷ್ಟೆಲ್ಲ ಮಾಡಲು ಸಾಧ್ಯವೇ ಎಂಬ ಅನುಮಾನ ಬರುವಷ್ಟು ಬಾಳಪ್ಪನವರ ಸಾಧನೆ ಇರುವುದು ಗಮನಾರ್ಹ ಸಂಗತಿ.

**ಸ್ವಾತಂತ್ರ್ಯನಂತರ :**

ಸ್ವಾತಂತ್ರ್ಯಪೂರ್ವದ ಬಾಳಪ್ಪನವರ ಚರಿತ್ರೆ ಈ ರೀತಿಯದು. ಅವರೇ ಹೇಳುತ್ತಾರೆ ''ನಾನಾಗ ಜನಪದ ಹಾಡುಗಳನ್ನು ಹಾಡುತ್ತಿರಲಿಲ್ಲ'' ಎಂದು. ಸ್ವಾತಂತ್ರ್ಯಪೂರ್ವದಲ್ಲಿ ಅವರು ಮಾಡಿದ ದೇಶಭಕ್ತಿಯ ಕೆಲಸ-ಯಾವ ರಾಷ್ಟ್ರಪ್ರೇಮಿಗೂ ಕಡಿಮೆ ಇಲ್ಲದ್ದು.

ಹೊಟ್ಟೆ ಹೊರಕೊಳ್ಳುವುದೇ ದುಸ್ತರವಾಗಿದ್ದ ಕಾಲದಲ್ಲಿ, ಬಾಳಪ್ಪನವರು ಹೊಟ್ಟೆ ಹೊರಕೊಳ್ಳುವ ಕೆಲಸದ ಜೊತೆಗೆ-ದೇಶ ಸ್ವಾತಂತ್ರ್ಯದ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಅವರ ಹಾಡುಗಾರಿಕೆ ಕೇವಲ ಗಾಯನ ಗೋಷ್ಠಿಗಳಾಗಿರಲಿಲ್ಲ. ಅವರು ತಮ್ಮದೇ ಆದ ವಿವರಣೆಗಳನ್ನು ಕೊಡುತ್ತ ಹೋಗುವ ರೀತಿ ತುಂಬಾ ಪರಿಣಾಮಕಾರಿಯಾಗಿರುತ್ತಿತ್ತಂತೆ. ಸ್ವಾತಂತ್ರ್ಯ ಬಂದ ನಂತರ ಸಂದರ್ಭ ಬದಲಾಯಿತು. ಬಾಳಪ್ಪನವರ ಹಾಡುಗಳೂ ಬದಲಾದವು. ಒಂದು ಇಲಾಖೆಯ ಸಾಮಾನ್ಯ ನೌಕರನಾಗಿ ಪುನಃ ಅವರು ಅವಶ್ಯಕವಾದ ದೇಶದ ಕೆಲಸದಲ್ಲಿಯೇ ತೊಡಗಿದರು.

೧೯೪೭ರಿಂದ೧೯೭೪ರವರೆಗೆ ನೌಕರಿಯಲ್ಲಿದ್ದುಕೊಂಡು ರೈತರಿಗೆ ಒಕ್ಕಲುತನ ವಿಷಯಕವಾದ ಬೀಜ, ಗೊಬ್ಬರ, ಆಧುನಿಕ ಕೃಷಿ ಬೇಸಾಯ ಪದ್ಧತಿಗಳನ್ನಲ್ಲದೆ, ಕುಟುಬ ಯೋಜನೆಯ ವಿಷಯಕವಾದ ಹಾಡುಗಳನ್ನು ರಚಿಸಿ-ಹಾಡಿ, ತಿಳಿಸಿ-ಹೇಳಿ, ದೇಶದ ರೈತರ ಉದ್ಯೋಗ ಸುಧಾರಿಸಲು, ಅವರ ಕುಟುಂಬಗಳು ಸುಧಾರಿಸಲು, ಸಹಾಯವಾದರು. ಇದೆಲ್ಲ ನೋಡಿದರೆ-ಬಾಳಪ್ಪನವರ ಸಂಗೀತ ಸೇವೆ ಅವರಿರುವವರೆಗೆ ದೇಶಕ್ಕಾಗಿ ದುಡಿಯಿತು ಎಂಬುದು ಗಮನಾರ್ಹ ಸಂಗತಿ.

**ಜನಪ್ರಿಯ ಹಾಡುಗಾರ :**

ಈಗ ಉತ್ತರ ಕರ್ನಾಟಕದ ಪ್ರಸಿದ್ಧ ಮಠಗಳ ಜಾತ್ರೆ, ಉತ್ಸವಗಳಲ್ಲದೆ, ಪ್ರತಿಷ್ಠಿತ ವೇದಿಕೆಗಳಿಗೆ ಬಾಳಪ್ಪನವರನ್ನು ಆಮಂತ್ರಿಸಲು ಪ್ರಾರಂಭವಾಯಿತು. ಅವರು ಎಷ್ಟರಮಟ್ಟಿಗೆ ಜನಪ್ರಿಯವಾಗಲು ತೊಡಗಿದರೆಂದರೆ-ಹುಕ್ಕೇರಿ ಬಾಳಪ್ಪನವರ ಹಾಡುಗಾರಿಕೆ ಇಲ್ಲದೆ ಅವೆಲ್ಲ ಭಣ ಭಣವೆನ್ನತೊಡಗಿದವು. ಕಲಬುರ್ಗಿಯ ಗುರುಬಸವ ಮಠಕ್ಕೂ ಅವರನ್ನು ಮೇಲಿಂದ ಮೇಲೆ ಕರೆಸಲಾಗುತ್ತಿತ್ತು. ಇಂತಹ ಪ್ರಸಂಗಗಳಲ್ಲಿ ಅವರು ಜನಪದ ಹಾಡುಗಳನ್ನು ವ್ಯಾಪಕವಾಗಿ ಬಳಸಲು ಪ್ರಾರಂಭಿಸಿದರು. ಶೋಬಾನೆ ಹಾಡುಗಳು, ಕುಟ್ಟುವ, ಬೀಸುವ, ಲಾವಣಿ, ದಾಂಪತ್ಯ ಪ್ರಧಾನ ಮುಂತಾದ ಜನಪದ ಹಾಡುಗಳನ್ನು ಹಾಡುವುದಲ್ಲದೆ, ಕನ್ನಡದ ಪ್ರಸಿದ್ಧ

ಕವಿಗಳಾದ ಕುವೆಂಪು, ಬೇಂದ್ರೆ, ಕಣವಿ, ನರಸಿಂಹಸ್ವಾಮಿ, ಕಾವ್ಯಾನಂದ, ಆನಂದಕಂದ, ಶಿಶುನಾಳ ಶರೀಫ, ಕಡಕೋಳ ಮಡಿವಾಳಪ್ಪ-ಮುಂತಾದ ಕವಿಗಳ ಪ್ರಸಿದ್ಧ ಹಾಡುಗಳನ್ನು ಹಾಡಲು ಪ್ರಾರಂಭಿಸಿದರು.

ಕುವೆಂಪು ಅವರ 'ಬಾರಿಸು ಕನ್ನಡ ಡಿಂಡಿಮವ', ಆನಂದಕಂದರ 'ಯಾತಕವ್ವ ಹುಬ್ಬಳ್ಳಿ ಧಾರವಾಡ', ಕಾವ್ಯಾನಂದರ 'ಮೊದಲು ಮಾನವನಾಗು', ಬೇಂದ್ರೆಯವರ 'ಹುಬ್ಬಳ್ಳಿಯಾಂವ', ಕಡಕೋಳ ಮಡಿವಾಳಪ್ಪನವರ 'ತನ್ನ ತಾ ತಿಳಿದ ಮೇಲೆ' ಮುಂತಾದ ಹಾಡುಗಳನ್ನು ಬಾಳಪ್ಪನವರ ಬಾಯಿಯಿಂದಲೇ ಕೇಳಬೇಕೆಂಬಷ್ಟು ಪ್ರಸಿದ್ಧರಾದರು.

## ವಚನಗಳ ಹಾಡುಗಾರಿಕೆ :

ವಚನಗಳನ್ನು ಹಾಡುಗಾರಿಕೆಗೆ ಅಳವಡಿಸಿದ ಇತಿಹಾಸ ಇದೇ ಅರವತ್ತು ವರ್ಷಗಳಷ್ಟು ಹಿಂದಿನದು. ಪಂಚಾಕ್ಷರಿ ಗವಾಯಿಗಳು, ಅನಕೃ ಸಲಹೆಯ ಮೇರೆಗೆ ಮಲ್ಲಿಕಾರ್ಜುನ ಮನ್ಸೂರ್ ಅವರು-ಇವರ ಶಿಷ್ಯಂದಿರಾದ ದಿ. ಸಿದ್ಧರಾಮ ಜಂಬಲದಿನ್ನಿ, ಬಸವರಾಜ ರಾಜಗುರು-ಮುಂತಾದವರು ಹಿಂದುಸ್ತಾನಿ ಸಂಗೀತದ ರಾಗಗಳನ್ನು ವಚನಗಳಿಗೆ ಅಳವಡಿಸಿ ಹಾಡಲು ಪ್ರಾರಂಭಿಸಿದ್ದೇ ಪ್ರಥಮ.

ದಿ. ಸಿದ್ಧರಾಮ ಜಂಬಲದಿನ್ನಿ ಮತ್ತು ರಾಜಗುರು ಅವರ ಸಮಕಾಲೀನರಾದ ಬಾಳಪ್ಪನವರು-ಹಿಂದುಸ್ತಾನಿ ಸಂಗೀತಕ್ಕಿಂತಲೂ ಭಿನ್ನವಾದ, ಜಾಪದ ಧಾಟಿಗಳಿಗೆ ಹತ್ತಿರವಾದ ರೀತಿಯಲ್ಲಿ-ವಚನಗಳಿಗೆ ತಮ್ಮದೇ ಆದ ಧಾಟಿಗಳನ್ನು ಅಳವಡಿಸಿ ಹಾಡಲು ಪ್ರಾರಂಭಿಸಿದರು. ಇದು ಬಾಳಪ್ಪನವರು ಹಾಕಿದ ಸ್ವತಂತ್ರ ಸಂಪ್ರದಾಯ. ಪ್ರಸಿದ್ಧ ಹಿಂದೂಸ್ಥಾನಿ ಸಂಗೀತಗಾರರ ಜೊತೆ ಸುಗಮ ಸಂಗೀತದ ಎಳೆತಕ್ಕೆ ವಚನಗಳ ಹಾಡುಗಾರಿಕೆಯನ್ನು ಎಳೆತಂದದ್ದು ಉಲ್ಲೇಖನೀಯ ಸಂಗತಿ.

## ಜನರ ಪ್ರೀತಿ-ಪ್ರಶಸ್ತಿಗಳು :

ಹಾಡನ್ನೇ ತನ್ನ ಉಸಿರಾಗಿಸಿಕೊಂಡ ಬಾಳಪ್ಪನವರಿಗೆ ಜನ ಪ್ರೀತಿಯಿಂದ ಇಟ್ಟ ಹೆಸರುಗಳು, ಕೊಟ್ಟ ಬಿರುದುಗಳು ಅನಂತ.

ಅವನ್ನೆಲ್ಲ ನೋಡಿದರೆ ಬಾಳಪ್ಪನವರು ಎಂತಹ ಜನಪ್ರಿಯ ಹಾಡುಗಾರರಾಗಿದ್ದರು ಎಂಬುದು ನಮಗೆ ಅರಿವಾಗುತ್ತದೆ. ಮುರಗೋಡದ ಮುಂಗೋಳಿ, ಮುರಗೋಡದ ಕಾಕಾ, ಮಾತಿನ ಕಾಕಾ, ಸಭಾಭೂಷಣ, ಜನಪದ ಜಾದೂಗಾರ, ಸಾವಿರ ಹಾಡಿನ ಸರದಾರ, ಜನಪದ ಸಾಹಿತ್ಯಾಚಾರ್ಯ, ಜನಪದ ಕಲಾನಿಧಿ, ಜನಪದ ಜ್ಯೋತಿ, ಬೆಲ್ಲದ ಮಾತಿನ ಕಂಚಿನ ಕಂಠದ ಬಾಳಪ್ಪ, ಹೊಂಗಲ ನಾಡಿನ ಹೆಜ್ಜೇನು, ಜೇನುದನಿಯ ಬಾಳಪ್ಪ ಹುಕ್ಕೇರಿ, ಸಂಗೀತ ಲೋಕದ ಧ್ರುವತಾರೆ- ಹೀಗೆ ನಾನಾಬಗೆಯಾಗಿ ಕರೆದು-ಜನ ತಾವೇ ಖುಷಿಗೊಂಡಿದ್ದಾರೆ.

ಅವರ ಹಾಡಿನ ಬದುಕಿಗೆ, ಸಾರ್ಥಕ ಸೇವೆಗೆ- ಪ್ರೋತ್ಸಾಹ, ಮನ್ನಣೆ ಎಂಬಂತೆ ಸರಕಾರದಿಂದಲೂ ನಾನಾ ಬಗೆಯ ಪ್ರಶಸ್ತಿಗಳು ಗೌರವಗಳು ಸಂದಿವೆ.

೧೯೫೯ರಲ್ಲಿ ರಾಜ್ಯ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ
೧೯೮೦-೮೧ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ
೧೯೮೨ರಲ್ಲಿ ದಕ್ಷಿಣ ಹಿಂದೂಸ್ಥಾನದ ಸಾಂಸ್ಕೃತಿಕ ಸಂಸ್ಥೆ (ತಿರುವಾಂಕೂರು-ಕೇರಳ) ಪ್ರಶಸ್ತಿ
೧೯೮೬ರಲ್ಲಿ ರಾಜ್ಯೋತ್ಸವ ಪ್ರಶಸ್ತಿ
೧೯೮೯ರಲ್ಲಿ ಮಧ್ಯಪ್ರದೇಶ ಸರ್ಕಾರದ ತುಳಸಿ ಸಮ್ಮಾನ ಪ್ರಶಸ್ತಿ

ಇವೆಲ್ಲ ಒಬ್ಬ ಮಹಾನ್ ಗಾಯಕನ ದಾಖಲೆಗಳು. ಜಾನಪದ ಅಕಾಡೆಮಿ ಸ್ಥಾಪನೆಯಾದ ಪ್ರಥಮ ಅವಧಿಗೆ ಅವರು ಅದರ ಸದಸ್ಯರಾಗಿದ್ದರು (೧೯೮೦-೮೩). ಅವರ ಸಾಧನೆಯನ್ನು ಕುರಿತು ಕನ್ನಡದ ಪ್ರಸಿದ್ಧ ಪತ್ರಿಕೆಗಳಾದ ಪ್ರಜಾವಾಣಿ, ಸುಧಾ, ಸಂಯುಕ್ತ ಕರ್ನಾಟಕ, ಪ್ರಪಂಚ, ಕರ್ಮವೀರ, ಜನಮಿತ್ರ, ಇಂಗ್ಲೀಷಿನ ಡೆಬೋನಿಯರ್, ಮರಾಠಿಯ ತರುಣಭಾರತ ಮುಂತಾದ ಪತ್ರಿಕೆಗಳು ಬಾಯಿತುಂಬ ಹೊಗಳಿ ಬರೆದಿವೆ. ಪ್ರಸಿದ್ಧ ಲೇಖಕರಾದ ಡಾ॥ ಹಾ. ಮಾ. ನಾಯಕ, ಗೊರುಚ, ಸ. ಸ. ಮಾಳವಾಡ, ಕೀ. ರಂ. ನಾಗರಾಜ ಇನ್ನೂ ಮುಂತಾದವರು ಬಾಳಪ್ಪನವರ ಬಗ್ಗೆ ತೆರೆದ ಮನಸ್ಸಿನಿಂದ ಬರೆದಿದ್ದಾರೆ. ಅವರ ಸಾಧನೆಯನ್ನು ದಾಖಲಿಸುವ ಎರಡು ಪುಸ್ತಿಕೆಗಳೂ ಹೊರಬಂದಿವೆ.

'ವಿಕಾಸಗೀತೆ', 'ಭಕ್ತಿಗೀತೆ' ಗಳೆಂಬ ಎರಡು ಗೀತ ಸಂಗ್ರಹಗಳನ್ನು ಪ್ರಕಟಿಸಿ ಕವಿಗಳ ಸಾಲಿನಲ್ಲಿ ನಿಲ್ಲುವ ಬಾಳಪ್ಪನವರ ಜೀವನವನ್ನು ಕುರಿತಂತೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ Ph.D. ಅಧ್ಯಯನವೂ ಆಗಿದೆ.

# ಬಾಳಪ್ಪಹುಕ್ಕೇರಿ ಅವರ ಜೀವನದ ಮಹತ್ವದ ಸಂಗತಿಗಳು

೧. **ಹೆಸರು:** ಬಾಳಪ್ಪ ಹುಕ್ಕೇರಿ,
**ತಂದೆ :** ವೀರಭದ್ರಪ್ಪ, **ತಾಯಿ:** ಚೆನ್ನವೀರಮ್ಮ,
**ಹೆಂಡತಿ :** ಶಾಂತಮ್ಮ

೨. **ಜನನ :** ೨೧.೮.೧೯೧೧ **ಮರಣ :** ೧೯.೧೧.೧೯೯೨

೩. **ಊರು :** ಮುರಗೋಡ, ತಾ। ಸವದತ್ತಿ, ಜಿ। ಬೆಳಗಾಂ

೪. **ಕಾರಾಗೃಹವಾಸ :** ಕಾಯ್ದೆಭಂಗ ಚಳುವಳಿಯಲ್ಲಿ ಭಾಗವಹಿಸಿದ್ದರಿಂದ ಆರು ತಿಂಗಳು, ೧೯೩೦

೫. **ನಾಟಕ ಕಂಪನಿ ನಡೆಸಿದ್ದು :** ೧೯೩೨-೪೦

೬. **ಕ್ಷೇತ್ರ ಪ್ರಚಾರಕ ಹುದ್ದೆ :** ೧೯೪೨-೭೯

೭. **ಸಂದ ಪ್ರಶಸ್ತಿಗಳು :**
   i . ೧೯೫೫ರಲ್ಲಿ ರಾಜ್ಯ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ.
   ii . ೧೯೮೦-೮೧ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ
   iii .೧೯೮೨ರಲ್ಲಿ ದಕ್ಷಿಣ ಹಿಂದೂಸ್ಥಾನದ ಸಾಂಸ್ಕೃತಿಕ ಸಂಸ್ಥೆ (ತಿರುವಾಂಕೂರು-ಕೇರಳ) ಪ್ರಶಸ್ತಿ.
   iv . ೧೯೮೬ರಲ್ಲಿ ರಾಜ್ಯೋತ್ಸವ ಪ್ರಶಸ್ತಿ
   v . ೧೯೮೯ರಲ್ಲಿ ಮಧ್ಯಪ್ರದೇಶ ಸರ್ಕಾರದ ತುಳಸಿ ಸಮ್ಮಾನ ಪ್ರಶಸ್ತಿ

೮. **ಕೃತಿಗಳು :** i. ವಿಕಾಸಗೀತೆಗಳು ii. ಭಕ್ತಿಗೀತೆಗಳು

೯. **ಮೆಚ್ಚುಗೆ ಬಿರುದುಗಳು :** ಸಾವಿರ ಹಾಡಿನ ಸರದಾರ, ಜಾನಪದ ಗಾರುಡಿಗ, ಮುರಗೋಡದ ಕಾಕಾ, ಮಾತಿನ ಕಾಕಾ, ಕಲಾನಿಪುಣ, ಜಾನಪದ ಸಂಗೀತರತ್ನ, ಹೊಂಗಲನಾಡಿನ ಹಮ್ಮೀರ, ಕನ್ನಡ ಪರಿಚಾರಕ, ನಾದಯೋಗಿ, ಭಾವೈಕ್ಯದ ಕೊಂಡಿ, ವಿನೋದರತ್ನ, ಸಭಾಭೂಷಣ.

೧೦. **ಭಾಗವಹಿಸಿದ ಮಹತ್ವದ ಸಭೆಗಳು, ನಡೆಸಿದ ಸಂಗೀತ ಕಚೇರಿಗಳು**
   ೧. ಸಂಗೀತ ಕಾರ್ಯಕ್ರಮ, ಪುಣೆ (ಕನ್ನಡ, ಮರಾಠಿ, ಹಿಂದಿ

ಗಾಯನ), ೧೯೪೨.

೨. ನೆಹರೂ ನಿವಾಸದಲ್ಲಿ, ದೆಹಲಿ, ೧೯೫೫.

೩. ಯುವಜನ ಮೇಳ, ದೆಹಲಿ, ೧೯೫೫.

೪. ರಾಜೇಂದ್ರಪ್ರಸಾದರ ಸಮ್ಮುಖದಲ್ಲಿ, ೧೯೫೯.

೫. ಇಂದಿರಾಗಾಂಧಿ ತುಲಾಭಾರ, ಬಿಜಾಪುರ, ೧೯೬೨.

೬. ಕನ್ನಡ ರಾಜ್ಯೋತ್ಸವ, ದೆಹಲಿ, ೧೯೬೭, ೧೯೭೭.

೭. ರಾಷ್ಟ್ರಪತಿ ಡಾ॥ ಝಕೀರ ಹುಸೇನ ಸಮ್ಮುಖದಲ್ಲಿ, ದೆಹಲಿ, ೧೯೬೭.

೮. ದೂ.ದ. ದಲ್ಲಿ ಹಾಡುಗಳ ಪ್ರಸಾರ, ಹೈದ್ರಾಬಾದ್, ೧೯೭೧.

## ಆಧಾರ ಗ್ರಂಥಗಳು :

೧. **ಸಾವಿರ ಹಾಡಿನ ಸರದಾರ- ಜನಪದ ರತ್ನ ಬಾಳಪ್ಪ ಹುಕ್ಕೇರಿ**
- ಬಿ. ಸಿ. ಪಾಟೀಲ, ಬಸವರಾಜ ಕುಂಚೂರ
- ಜ್ಞಾನೋದಯ ವಾಚನಾಲಯ, ಮೊರಬ, ೧೯೮೭.

೨. **ಜಾನಪದ ಸರದಾರ : ಬಾಳಪ್ಪ ಹುಕ್ಕೇರಿ**
- (ಸಂ.) ಗೊ. ರು. ಚನ್ನಬಸಪ್ಪ
- ಎಸ್. ಜೆ. ಎಂ. ಮುದ್ರಣ (ಪ್ರೈ. ಲಿ.), ಬೆಂಗಳೂರು, ೧೯೮೩

೩. **ಹಣತೆಗಳು, ಡಾ॥ ಎಚ್. ಚಂದ್ರಶೇಖರ**
- ಮಹಾಕವಿ ಹರಿಹರ ಸ್ಮಾರಕ ಸಂಶೋಧನ ಕೇಂದ್ರ
ಹಂಪೆ, ಜಿ. ಬಳ್ಳಾರಿ, ೧೯೯೭

೪. **ಜಾನಪದ ಸಂಗೀತ ಕ್ಷೇತ್ರಕ್ಕೆ ಶ್ರೀ ಹುಕ್ಕೇರಿ ಬಾಳಪ್ಪನವರ ಕೊಡುಗೆ- ಒಂದು ಅಧ್ಯಯನ (ಅಪ್ರಕಟಿತ ಪಿಎಚ್. ಡಿ. ಪ್ರಬಂಧ) ೧೯೯೬.**
- ಶ್ರೀಮತಿ ನಂದಾ ಎಂ. ಪಾಟೀಲ.



ಬಾಳಪ್ಪನವರು ಕೇವಲ ಪ್ರಭಾವಶಾಲಿ ಹಾಡುಗಾರರಷ್ಟೇ ಅಲ್ಲ, ಅವರು ಅಷ್ಟೇ ಒಳ್ಳೆಯ ಮಾತುಗಾರರೂ ಕೂಡ ಆಗಿದ್ದರು. ಅದಕ್ಕಾಗಿಯೇ ಹಾಡಿನಷ್ಟೇ ಅವರ ವಿವರಣೆಗಳೂ ಆಕರ್ಷಕವಾಗಿರುತ್ತಿದ್ದವು. ಈ ಮಾತಿನ ಬಲದಿಂದಲೇ ಅವರು ಅನೇಕರ ಜೊತೆ ಉತ್ತಮ ಸಂಬಂಧವನ್ನಿಟ್ಟುಕೊಂಡಿದ್ದರು. ನಂಜಿಲ್ಲದ ಅವರ ಹೃದಯದಿಂದ ಬರುವ ಮಾತುಗಳು ಎಂಥವರನ್ನೂ ಕರಗಿಸಬಲ್ಲ ಶಕ್ತಿ ಹೊಂದಿದ್ದವು. ನುಡಿದರೆ ಲಿಂಗ ಮೆಚ್ಚಿ ಅಹುದ ಹುದೆನಿಸುವ ಮಾತುಗಾರಿಕೆ ಅವರದು. 'ಒಳ್ಳೆಯ ಮಾತುಗಳನ್ನಾಡಿದರೆ ಏನು ನಾಲಿಗಿ ಸೀಳಿ ಬೀಳುತ್ತದೆಯೇ? ಎಂಬ ಭಾವನೆಯ ಬಾಳಪ್ಪ, ಕುಳ್ಳಿರೆಂದರೆ ನೆಲ ಕುಳಿ ಹೋಹುದೇ? ಒಡನೆ ನುಡಿದರೆ ಶಿರ ಹೊಟ್ಟೆಗಳು ಒಡೆಯುವುವೇ? ಸಹಾಯ ಮಾಡಲು ಆಗದಿದ್ದರೇನಾಯಿತು? ಒಂದು ಒಳ್ಳೆ ಮಾತನಾಡಲಾದರೂ ಆಗಬಹುದಲ್ಲ'- ಎಂಬ ತತ್ವದವರು ಶ್ರೀ ಬಾಳಪ್ಪನವರು.